

# ‘ನಾರಿ ಶಕ್ತಿ’ ವರದಿ

ಏಪ್ರಿಲ್ 2024

BAHUTVA KARNATAKA

2022ರಲ್ಲಿ ‘ಆಜಾದಿ ಕಾ ಅಮೃತ ಮಹೋತ್ಸವ’ದ ನಡುವೆ ಪ್ರಧಾನಿ ನರೇಂದ್ರ ಮೋದಿಯವರು ‘ನಾರಿ ಶಕ್ತಿ’ಯ ಮಹತ್ವ ಸಾರಿದರು. ಆಗಿನಿಂದಲೂ ಇದನ್ನು ಪ್ರಮುಖ ಧ್ಯೇಯವಾಗಿ ಬಿಜೆಪಿ ಬಿಂಬಿಸುತ್ತಿದೆ. ಕಳೆದ ಒಂದು ದಶಕದಲ್ಲಿ ಮಹಿಳೆಯರ ಸ್ಥಿತಿಗತಿ ಹೇಗಿದೆ ಹಾಗೂ ಮಹಿಳಾ ಕೇಂದ್ರಿತ ಉಪಕ್ರಮಗಳ ಪರಿಣಾಮಗಳೇನಾಗಿವೆ ಎಂಬುದನ್ನು ಈ ವರದಿ ಅವಲೋಕಿಸುತ್ತದೆ.

TEN YEARS OF NDA • A GUARANTEE CHECK •

# “ಮಹಿಳೆ ಭದ್ರತೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು”

ಬಿಜೆಪಿ ಪ್ರಣಾಳಿಕೆ, 2019



“ಹೆಚ್ಚು ಗಮನ ಸೆಳೆದುಕೊಂಡ ಅತ್ಯಾಚಾರ ಪ್ರಕರಣಗಳು ಹಾಗೂ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳಿಂದಾಗಿ ಭಾರತದ ಗೌರವ ಕುಸಿದಿದೆ...... ಅತ್ಯಾಚಾರಗಳ ಬಗ್ಗೆ ಕೇಳಿದಾಗ ನಾವು ಲಜ್ಜೆಯಿಂದ ತಲೆ ತಗ್ಗಿಸುವಂತಾಗುತ್ತದೆ. .....ಇದನ್ನು ಯಾಕೆ ನಾವು ತಡೆಗಟ್ಟಬಾರದು?”

ನರೇಂದ್ರ ಮೋದಿ, 2014

“ಮಹಿಳೆಯ ಭದ್ರತೆ, ಉತ್ತರ ಪ್ರದೇಶ ಸರ್ಕಾರದ ಪ್ರಥಮ ಆದ್ಯತೆಯಾಗಿದೆ”

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್

ವಾಸ್ತವ

ಮೋದಿ ಆಡಳಿತದ ಕಳೆದ **10** ವರ್ಷಗಳಲ್ಲಿ

# ಮಹಿಳೆ ಮೇಲಿನ ಅಪರಾಧ ಹಾಗೂ ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿವೆ

ಮಹಿಳೆ ಮೇಲಿನ ಅಪರಾಧಗಳ ಒಟ್ಟು ಸಂಖ್ಯೆ 2014ರಲ್ಲಿ **3,37,922** ಇದ್ದದ್ದು 2020ರಲ್ಲಿ **3,71,503** ಕ್ಕೆ ಏರಿದೆ. (ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ)

2014ರಲ್ಲಿ ಮಹಿಳೆ ಮೇಲಿನ ಅಪರಾಧಗಳ ಸಂಖ್ಯೆ ಜನಸಂಖ್ಯೆಯ ಒಂದು ಲಕ್ಷ ಮಹಿಳೆಯರಿಗೆ **56.3** ಇದ್ದದ್ದು 2022ರಲ್ಲಿ **66.4**ಕ್ಕೆ ಏರಿಕೆಯಾಯಿತು

2020 ಹಾಗೂ 2021ಕ್ಕೆ ಹೋಲಿಸಿದರೆ 2022ರಲ್ಲಿ ಮಹಿಳೆ ಮೇಲಿನ ಅಪರಾಧಗಳ ಪ್ರಮಾಣ ತೀವ್ರ ಏರಿಕೆ ಕಂಡಿತು. ದಿಗ್ಭ್ರಮೆಗೊಳಿಸುವ **4,45,256** ಪ್ರಕರಣಗಳು ದಾಖಲಾಗಿವೆ. (ಪ್ರತಿ ಗಂಟೆಗೆ 51 ಎಫ್ಐಆರ್ ಗಳು ಹಾಗೂ ಭಾರತದಲ್ಲಿ ಪ್ರತಿ ದಿನ ಸರಾಸರಿ 88 ಮಹಿಳೆಯರು ಅತ್ಯಾಚಾರಕ್ಕೊಳಗಾಗುತ್ತಿದ್ದಾರೆ !)

**ಗಂಟೆಗೆ**

**51**

**ಎಫ್ಐಆರ್‌ಗಳು ಹಾಗೂ ಭಾರತದಲ್ಲಿ ಪ್ರತಿ ದಿನ ಸರಾಸರಿ**

**88**

**ಮಹಿಳೆಯರು ಅತ್ಯಾಚಾರಕ್ಕೊಳಗಾಗುತ್ತಿದ್ದಾರೆ !**

**ಹಿಂಸೆಯ ಪ್ರಮಾಣದಲ್ಲಿ ಏರಿಕೆ ಇದೆ. ಅದರಲ್ಲೂ ನಿರ್ದಿಷ್ಟವಾಗಿ ಬಿಜೆಪಿಯ ಸ್ತ್ರೀ ದ್ವೇಷಕ್ಕೆ ಬಲಿಯಾಗುತ್ತಿರುವವರು ಮುಸ್ಲಿಂ ಮಹಿಳೆಯರು. ಇದಕ್ಕೆ ಕಾರಣಗಳನ್ನು ಪತ್ತೆ ಹಚ್ಚುವುದು ಕಷ್ಟವೇನಲ್ಲ.**

## 2019

2019ರಲ್ಲಿ ಉತ್ತರಪ್ರದೇಶದ ಉನ್ನಾವೊದ 17 ವರ್ಷದ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಬಿಜೆಪಿ ಶಾಸಕ ಕುಲದೀಪ್ ಸಿಂಗ್ ಸೆಂಗಾರ್ ತಪ್ಪಿತಸ್ಥರಾಗಿದ್ದರು. ಸಂತ್ರಸ್ತೆಯು ತನಗೆ ತಾನೇ ಬೆಂಕಿಹಚ್ಚಿಕೊಂಡು ಸಾಯಲು ಯತ್ನಿಸಿ ಸಾರ್ವಜನಿಕ ಒತ್ತಡ ಹೆಚ್ಚಾದ ಮೇಲಷ್ಟೇ ಸೆಂಗಾರ್ ಅವರನ್ನು ವಶಕ್ಕೆ ಪಡೆಯಲಾಯಿತು. ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸಿ ರಕ್ಷಣೆ, ಪರಿಹಾರಕ್ಕೆ ಆದೇಶ ನೀಡುವವರೆಗೂ ಸಂತ್ರಸ್ತೆಯ ಕುಟುಂಬವು ಕಿರುಕುಳ ಅನುಭವಿಸುವುದು ಮುಂದುವರಿದಿತ್ತು. ಶಾಸಕನಿಗೆ ಬಿಜೆಪಿ ಬೆಂಬಲ ಮುಂದುವರಿದೇ ಇತ್ತು. ಆರೋಪಿ ಪರ ಸಮಾವೇಶವೊಂದನ್ನೂ ನಡೆಸಲಾಗಿತ್ತು.

## 2020

2020ರಲ್ಲಿ ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶದ ಹಾಥರಸ್ ನಲ್ಲಿ ಠಾಕೂರ್ ವ್ಯಕ್ತಿಗಳಿಂದ ಭೀಕರ ರೀತಿಯಲ್ಲಿ ಅತ್ಯಾಚಾರಕ್ಕೊಳಗಾದ ದಲಿತ ಯುವತಿಯ ಪ್ರಕರಣದಲ್ಲಿ ಅತ್ಯಾಚಾರ ಆರೋಪಗಳನ್ನು ಪೊಲೀಸರು ತಿರಸ್ಕರಿಸಿದ್ದಲ್ಲದೆ ರಾತ್ರಿಯ ಹೊತ್ತು ಸಂತ್ರಸ್ತೆಯ ದೇಹವನ್ನು ಸುಟ್ಟು ಹಾಕಿ ಸಾಕ್ಷ್ಯವನ್ನೂ ನಾಶಪಡಿಸಿದರು.

## 2021

2021ರಲ್ಲಿ, ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದ ಹಲವಾರು ಮುಸ್ಲಿಂ ಮಹಿಳೆಯರು, ಬುಲ್ಲಿ ಬಾಯ್ ಹಾಗೂ ಸುಲ್ಲಿ ಡೀಲ್ಸ್ ಆ್ಯಪ್ ಗಳಲ್ಲಿ ಆನ್ ಲೈನ್ ನಲ್ಲಿ ತಮ್ಮ ಪ್ರೊಫೈಲ್ ಗಳು ಹರಾಜುಗೊಂಡಿರುವುದನ್ನು ಕಂಡು ಆಘಾತಗೊಂಡರು. ಎಲ್ಲಾ ಆರು ಮಂದಿ ತೀವ್ರವಾದಿ ತಂತ್ರಜ್ಞಾನ ಪರಿಣತ ಯುವಕರನ್ನು 2022ರ ಜನವರಿಯಲ್ಲಿ ಬಂಧಿಸಲಾಯಿತು. ಆದರೆ 2022ರ ಜೂನ್ ನಲ್ಲಿ ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಲಾಯಿತು.

## 2022

2002ರಲ್ಲಿ ಗುಜರಾತ್ ನಲ್ಲಿ ನಡೆದ ಮುಸ್ಲಿಂ ವಿರೋಧಿ ಗಲಭೆಯ ಸಂದರ್ಭದಲ್ಲಿ ಸಾಮೂಹಿಕ ಅತ್ಯಾಚಾರಕ್ಕೊಳಗಾದ ಗರ್ಭಿಣಿ ಮುಸ್ಲಿಂ ಮಹಿಳೆ ಬಿಲ್ಕಿಸ್ ಬಾನು ಪ್ರಕರಣದ 11ಅತ್ಯಾಚಾರಿಗಳಿಗೆ ಸುದೀರ್ಘ ಕಾನೂನು ಸಮರದ ನಂತರ ಶಿಕ್ಷೆಯಾಗಿ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. 2022ರಲ್ಲಿ 'ಒಳ್ಳೆಯ ನಡತೆ' ಆಧಾರದ ಮೇಲೆ ಗುಜರಾತ್ ಸರ್ಕಾರ ಅವರನ್ನು ಬಿಡುಗಡೆ ಮಾಡಿತ್ತು. ಈ ಬಿಡುಗಡೆ ಆದೇಶಕ್ಕೆ ಕೇಂದ್ರ ಗೃಹ ಸಚಿವಾಲಯದ ಅಧಿಕೃತ ಅನುಮೋದನೆಯೂ ಇತ್ತು. ಬಿಡುಗಡೆಗೊಂಡ ಅತ್ಯಾಚಾರಿಗಳಿಗೆ ಹಾರ ಹಾಕಿ ಸ್ವಾಗತಿಸಿದ್ದಲ್ಲದೆ 'ಒಳ್ಳೆಯ ಸಂಸ್ಕಾರಿ ಬ್ರಾಹ್ಮಣರು' ಎಂದೂ ಗೋಧ್ರಾದ ಬಿಜೆಪಿ ಶಾಸಕ ಸಿ ಕೆ ರೌಲ್ಜಿ ಹಾಡಿಹೊಗಳ್ಳಿದ್ದರು.[2] ಗುಜರಾತ್ ಸರ್ಕಾರದ ಕ್ರಮವನ್ನು ಅಸಾಂವಿಧಾನಿಕ ಎಂದು ವ್ಯಾಖ್ಯಾನಿಸಿದ ಸುಪ್ರೀಂ ಕೋರ್ಟ್, ಈ ಬಿಡುಗಡೆ ಆದೇಶ ರದ್ದುಗೊಳಿಸಿತ್ತು.

# ವಾಸ್ತವ

## 2023

2023ರಲ್ಲಿ ಭಾರತ ಕುಸ್ತಿ ಒಕ್ಕೂಟದ (ಡಬ್ಲ್ಯುಎಫ್ ಐ) ನಿರ್ಗಮಿಸಲಿದ್ದ ಮುಖ್ಯಸ್ಥ ಹಾಗೂ ಬಿಜೆಪಿ ಎಂಪಿ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಲೈಂಗಿಕ ಕಿರುಕುಳ ಆರೋಪಗಳ ಹಿನ್ನೆಲೆಯಲ್ಲಿ ನವದೆಹಲಿಯಲ್ಲಿ ಪ್ರತಿಭಟಿಸುತ್ತಿದ್ದ ಒಲಿಂಪಿಕ್ ಹಾಗೂ ವಿಶ್ವ ಪದಕ ವಿಜೇತ ಮಹಿಳಾ ಕುಸ್ತಿ ಪಟುಗಳ ಮೇಲೆ ಪೊಲೀಸರಿಂದ ದಾಳಿ ನಡೆದು ಅವರನ್ನು ಬಲವಂತದಿಂದ ಪ್ರತಿಭಟನಾ ಜಾಗದಿಂದ ತೆರವುಗೊಳಿಸಲಾಗಿತ್ತು. ಈ ವಿಚಾರವನ್ನು ಕ್ಷುಲ್ಲಕೀಕರಿಸಿ ಎಂಪಿ ವಿರುದ್ಧ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಕೇಂದ್ರ ಮಹಿಳಾ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಈ ವಿಚಾರದ ಬಗ್ಗೆ ಮೌನ ತಾಳಿದರು. ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶದ ನಂತರವಷ್ಟೇ ಎಫ್ ಐಆರ್ ದಾಖಲಾಯಿತು.

ಮಣಿಪುರದಲ್ಲಿ ಮೈತೇಯಿ ಹಾಗೂ ಕುಕಿ-ಝೊ ಸಮುದಾಯದ ಮಧ್ಯೆ ವಿನಾಶಕಾರಿ ಸಂಘರ್ಷ ಆರಂಭವಾದ ನಂತರ 2023ರ ಮೇ 4ರಂದು ಜನರ ಗುಂಪಿನಿಂದ ಮೂವರು ಮಹಿಳೆಯರ ನಗ್ನ ಮೆರವಣಿಗೆ ಹಾಗೂ ಲೈಂಗಿಕ ದೌರ್ಜನ್ಯದ ಘಟನೆ ರಾಷ್ಟ್ರದಾದ್ಯಂತ ಆಕ್ರೋಶ ಹುಟ್ಟುಹಾಕಿತು. ಮೇ 18ರಂದು ಎಫ್ ಐಆರ್ ದಾಖಲಿಸಲಾಯಿತು. ಈ ಪ್ರಕರಣಕ್ಕೆ ಸಂಬಂಧಿಸಿದ ಮೊದಲ ಬಂಧನವಾದದ್ದು ಹಾಗೂ ಪ್ರಧಾನಿ ಹೇಳಿಕೆ ಹೊರಬಿದ್ದಿದ್ದು ಜುಲೈ 20ರಂದು. ಎಂದರೆ, 76 ದಿನಗಳ ನಂತರ! ಬಿಜೆಪಿ ಆಡಳಿತವಿರುವ ಈಶಾನ್ಯ ರಾಜ್ಯದಲ್ಲಿ ನಡೆಯುತ್ತಿರುವ ಹಿಂಸಾಚಾರ ಸಂದರ್ಭದ ಲೈಂಗಿಕ ಹಿಂಸಾಚಾರಗಳ ಹಲವು ಪ್ರಕರಣಗಳಲ್ಲಿ ಇದು ಒಂದು ಪ್ರಕರಣವಷ್ಟೇ. ನ್ಯಾಯವೆನ್ನುವುದು ಇಲ್ಲಿ ವಿಳಂಬವಾಗಿದೆ ಅಥವಾ ಇಲ್ಲವೇ ಇಲ್ಲ.

## 2024

2024ರಲ್ಲಿ, ಜಾರ್ಖಂಡ್ ನಲ್ಲಿ 7 ಪುರುಷರಿಂದ ಸ್ಪಾನಿಷ್ ಪ್ರವಾಸಿ ಮಹಿಳೆ ಮೇಲಾದ ಸಾಮೂಹಿಕ ಅತ್ಯಾಚಾರ ಪ್ರಕರಣವು ಎಷ್ಟು ಆಘಾತಕಾರಿಯೋ ಅಷ್ಟೇ ಆಘಾತಕಾರಿಯಾದದ್ದು ಭಾರತದಲ್ಲಿ ಮಹಿಳಾ ಪ್ರವಾಸಿಗಳ ಕಿರುಕುಳ ಪ್ರಕರಣಗಳನ್ನು ವಿವರಿಸಿದ್ದ ಎಕ್ಸ್ ( ಟ್ವೀಟ್) ಬರಹವೊಂದಕ್ಕೆ ಬಿಜೆಪಿ ಸದಸ್ಯೆ ಹಾಗೂ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮ ಅವರ ಪ್ರತಿಕ್ರಿಯೆ. ವಾಸ್ತವ ಘಟನೆಗಳಿಗಿಂತ ಭಾರತದ ಗೌರವಕ್ಕೆ ಚ್ಯುತಿ ತರುವ ಟ್ವೀಟ್ ಗಳ ಬಗ್ಗೆಯೇ ಅವರ ಕಾಳಜಿ ಹೆಚ್ಚಿನದಾಗಿತ್ತು.

**ಇಲ್ಲಿ ಪ್ರಸ್ತಾಪಿಸಿದ ಹಲವು ದೌರ್ಜನ್ಯಗಳು ಹಾಗೂ ಬಹು ಮುಖ್ಯವಾಗಿ ಮಣಿಪುರದಲ್ಲಿನ ಅನ್ಯಾಯದ ಪ್ರಕರಣಗಳಿಗೆ ಮೂಕ ಪ್ರೇಕ್ಷಕರಾಗಿದ್ದ ಪ್ರಧಾನಿಯಿಂದ ಹಿಡಿದು ಬಿಜೆಪಿಯ ಎಲ್ಲಾ ಹಂತಗಳಲ್ಲೂ ನಿಷ್ಕ್ರಿಯತೆ ಹಾಗೂ ಸಹಭಾಗಿತ್ವ ಎದ್ದುಕಾಣುತ್ತವೆ. ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಅವರು, ಲೈಂಗಿಕ ಹಿಂಸಾಚಾರದ ಬಗ್ಗೆ ಸಾರ್ವಜನಿಕವಾಗಿ ಮಾತನಾಡುವ ಸಂತ್ರಸ್ತೆಯರನ್ನು ಟೀಕಿಸಿ ಸರ್ಕಾರಕ್ಕೆ ಅಪಖ್ಯಾತಿ ತರುವವರೆಂದೂ ಆರೋಪಿಸಿದ್ದಾರೆ. ಇತರ ಬಿಜೆಪಿ ನಾಯಕರೂ ರಾಷ್ಟ್ರದಲ್ಲಿನ ಅತ್ಯಾಚಾರ ಪ್ರಕರಣಗಳು ಹಾಗೂ ಲೈಂಗಿಕ ಹಿಂಸೆಯ ಸಂಸ್ಕೃತಿಗೆ ಹೆಚ್ಚಿನ ಮಹತ್ವ ನೀಡದೆ ಕಡೆಗಣಿಸಿದ್ದಾರೆ. ಅದೂ ಅಪರಾಧ ಎಸಗಿದಾತ ಬಿಜೆಪಿ ಶಾಸಕ, ಪಕ್ಷದ ಕಾರ್ಯಕರ್ತನಾಗಿದ್ದು ಸಂತ್ರಸ್ತೆಯು ಅಲ್ಪಸಂಖ್ಯಾತ ಹಾಗೂ ದಲಿತ ಸಮುದಾಯಗಳಿಗೆ ಸೇರಿದವರಾಗಿದ್ದರೆ ನಿರ್ಲಕ್ಷ್ಯ ಕಟ್ಟಿಟ್ಟದ್ದು.**

ವಾಸ್ತವ

# ವೈವಾಹಿಕ ಅತ್ಯಾಚಾರ

**27%**
ಮಹಿಳೆಯರು ತಮ್ಮ ಗಂಡಂದಿರಿಂದ ದೈಹಿಕ ಹಿಂಸೆ

**6.7%**
ಮಹಿಳೆಯರು ಲೈಂಗಿಕ ಹಿಂಸೆ ಅನುಭವಿಸುತ್ತಾರೆ

ವಿವಾಹಿತೆಯ ಸ್ಥಾನಮಾನವು ಲೈಂಗಿಕ ಕೃತ್ಯಗಳಿಗೆ ತಂತಾನೇ ಸಮ್ಮತಿಯನ್ನು ಸೃಷ್ಟಿಸುವುದಿಲ್ಲವಾದ್ದರಿಂದ ವೈವಾಹಿಕ ಅತ್ಯಾಚಾರದ ಅಪರಾಧೀಕರಣಕ್ಕೆ ನ್ಯಾಯಮೂರ್ತಿ ಜೆ ಎಸ್ ವರ್ಮಾ ಸಮಿತಿಯು ಶಿಫಾರಸು ಮಾಡಿದೆ.

ಭಾರತವು ಸಹಿ ಹಾಕಿರುವ, ಮಹಿಳೆಯ ಮೇಲಿನ ಎಲ್ಲಾ ಬಗೆಯ ತಾರತಮ್ಯಗಳ ನಿವಾರಣೆಯ ನಿರ್ಣಯವು (ಸೀಡಾ) ವೈವಾಹಿಕ ಅತ್ಯಾಚಾರವನ್ನು ನಿಷೇಧಿಸಿದೆ. ಕಳೆದ ಐದು ದಶಕಗಳಲ್ಲಿ ಹಲವು ರಾಷ್ಟ್ರಗಳು ವೈವಾಹಿಕ ಅತ್ಯಾಚಾರವನ್ನು ಅಪರಾಧದ ವ್ಯಾಖ್ಯೆಗೆ ತಂದಿವೆ.

**ಆದರೆ, ವಿವಾಹವೆಂಬ ಪವಿತ್ರ 'ಸಂಸ್ಥೆ'ಯ ಮೇಲೆ ಪರಿಣಾಮ ಬೀರುತ್ತದೆ ಎನ್ನುವ ನೆಲೆಯಲ್ಲಿ 'ವೈವಾಹಿಕ ಅತ್ಯಾಚಾರ'ದ ವಿಚಾರವನ್ನು ಬದಿಗೆ ಸರಿಸುವುದನ್ನು ಭಾರತ ಸರ್ಕಾರ ಮುಂದುವರಿಸಿದೆ. ಮಹಿಳೆಯ ಸಮ್ಮತಿ, ಘನತೆ ಹಾಗೂ ಭದ್ರತೆಯ ವಿಚಾರಗಳಿಗೆ ಅದೇ ಪರಿಗಣನೆಯನ್ನು ನೀಡಲಾಗಿಲ್ಲ.**

2016ರಲ್ಲಿ, ವೈವಾಹಿಕ ಅತ್ಯಾಚಾರದ ಪರಿಕಲ್ಪನೆಯನ್ನು ಭಾರತೀಯ ಸಂದರ್ಭದಲ್ಲಿ ಸೂಕ್ತವಾಗಿ ಅನ್ವಯಿಸಲಾಗದು ಹಾಗೂ ವೈವಾಹಿಕ ಅತ್ಯಾಚಾರವನ್ನು ಅಪರಾಧದ ವ್ಯಾಖ್ಯೆಗೆ ತರುವುದರಿಂದ ಕುಟುಂಬ ಸಂಬಂಧಗಳು ಹಾಳಾಗುತ್ತವೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಮೇನಕಾ ಗಾಂಧಿ ಸಂಸತ್ತಿಗೆ ತಿಳಿಸಿದ್ದರು. 2022ರಲ್ಲಿ ಬಿಜೆಪಿ ನಾಯಕ ಸುಶೀಲ್ ಮೋದಿಯವರೂ ವೈವಾಹಿಕ ಅತ್ಯಾಚಾರವನ್ನು ಸಾಬೀತು ಮಾಡುವುದು ಕಷ್ಟ ಹಾಗೂ ಅದನ್ನು ಅಪರಾಧದ ವ್ಯಾಖ್ಯೆಗೆ ತರುವ ಮೂಲಕ ವಿವಾಹವೆಂಬ ಸಂಸ್ಥೆಯ ಅಂತ್ಯವಾಗುತ್ತದೆ ಎಂದಿದ್ದರು. 2023ರಲ್ಲಿ ಐಪಿಸಿ 375ನೇ ವಿಧಿಗೆ ಇರುವ ವಿನಾಯಿತಿಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಗೆ ಸಲ್ಲಿಸಲಾಗಿದ್ದಅರ್ಜಿಗಳಿಗೆ ಪ್ರತಿಕ್ರಿಯೆಯಾಗಿ, 'ಸಾಮಾಜಿಕವಾಗಿ ಉಂಟಾಗಬಹುದಾದ ಸಂಕೀರ್ಣ ಪರಿಣಾಮಗಳ' ಕಾರಣದಿಂದ ವೈವಾಹಿಕ ಅತ್ಯಾಚಾರದ ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳುವ ಬಗ್ಗೆ ಕೇಂದ್ರ ಸರ್ಕಾರವು ತಪ್ಪಿಸಿಕೊಳ್ಳುವುದನ್ನು ಮುಂದುವರಿಸಿತು.

## ವಾಸ್ತವ

# ಮಹಿಳೆಯ ಸುರಕ್ಷತೆ ಹಾಗೂ ಭದ್ರತೆಯ ಖಾತ್ರಿ

ನಿರ್ಭಯ ಅತ್ಯಾಚಾರ ಪ್ರಕರಣಕ್ಕೆ ವ್ಯಕ್ತವಾದ ಸಾರ್ವಜನಿಕ ಆಕ್ರೋಶದ ನಂತರ 2013ರಲ್ಲಿ ಸ್ಥಾಪಿಸಲಾದ ನಿರ್ಭಯಾ ನಿಧಿಯು, ಮಹಿಳೆಯರ ಸುರಕ್ಷತೆ ಸುಧಾರಣೆಗೆ ಪ್ರಮುಖ ಉಪಕ್ರಮವಾಗಿದೆ. ಹೀಗಿದ್ದೂ ಈ ನಿಧಿಯನ್ನು ಸರಿಯಾಗಿ ಬಳಸಿಕೊಳ್ಳಲಾಗಿಲ್ಲ, ಬಹುಶಃ ತಪ್ಪಾಗಿಯೂ ಬಳಸಿಕೊಳ್ಳಲಾಗಿದೆ ಎಂಬುದು ನಾಯಕತ್ವದ ಕೊರತೆ, ನೀಡಬೇಕಾಗಿದ್ದ ಗಮನ ಹಾಗೂ ಗಂಭೀರತೆಗಳ ಕೊರತೆಯನ್ನೂ ಸೂಚಿಸುತ್ತದೆ.

ಫಾಸ್ಟ್ ಟ್ರ್ಯಾಕ್ ಕೋರ್ಟ್ ಗಳ ಸ್ಥಾಪನೆಯ ನಂತರವೂ 2021ರಲ್ಲಿ ಮಹಿಳೆ ಮೇಲಿನ ಅಪರಾಧಗಳಿಗೆ ಶಿಕ್ಷೆಯ ಪ್ರಮಾಣ 26.5% ಇತ್ತು ಹಾಗೂ ಬಾಕಿ ಉಳಿದ ಪ್ರಕರಣಗಳ ಪ್ರಮಾಣ 95% ಇತ್ತು.

2014ರಿಂದ 2021ರವರೆಗೆ, ಮಂಜೂರಾದ ಹಣದಲ್ಲಿ, ನಿರ್ವಹಿಸಬೇಕಾದ ಹೊಣೆಗಾರಿಕೆಯ ನೋಡಲ್ ಸಚಿವಾಲಯವಾಗಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಕ್ಕೆ ಸಿಕ್ಕಿದ್ದು ಕೇವಲ 12% ಹಣ ಕೇವಲ 30% ಹಣ ಬಳಸಿಕೊಂಡಿದೆ. ಗೃಹ ಸಚಿವಾಲಯ, ಪೊಲೀಸ್, ರೈಲ್ವೆ, ರಸ್ತೆ ಇತ್ಯಾದಿಗಳಿಗೆ ಮಂಜೂರು ಮಾಡಲಾದ ದೊಡ್ಡ ಮೊತ್ತದ ನಿಧಿಯನ್ನು ಮೂಲ ಸೌಕರ್ಯ ಮತ್ತಿತರ ಮಹಿಳೆಯರಿಗೆ ಸಂಬಂಧ ಪಡದ ನಿರ್ದಿಷ್ಟ ಬಳಕೆಗಳಿಗೆ ವಿನಿಯೋಗಿಸಲಾಗಿದೆ.

ಮಹಿಳಾ ಸುರಕ್ಷತೆ ಬಲಗೊಳಿಸಲು ಯೋಜನೆಗಳನ್ನು ಮಾಡಿದರೂ, ನಿರ್ಲಕ್ಷಿತ ಅನುಷ್ಠಾನ ಹಾಗೂ ಸ್ತ್ರೀ ದ್ವೇಷದ ಧೋರಣೆಗಳಿಂದಾಗಿ ಅವುಗಳು ಉಂಟುಮಾಡಬಹುದಾದ ಪರಿಣಾಮವನ್ನು.

In 2021, only

**50%**


of the

**9,764**

crores had been released and only

**29%**

utilised.



ಮಹಿಳಾ ಹಕ್ಕುಗಳು, ಘನತೆ ಹಾಗೂ ಏಜೆನ್ಸಿ

# “ಮಹಿಳೆಯರ ಸಬಲೀಕರಣಕ್ಕೆ ಸರ್ಕಾರ ಬದ್ಧವಾಗಿದೆ”

ಪ್ರಧಾನಿ ಮೋದಿ, ಮಾರ್ಚ್ 8, 2024



ಜೆಂಡರ್ ಅನ್ಯಾಯದ ವಿಷಯಗಳನ್ನು ನಿರ್ವಹಿಸಿ ಮಹಿಳಾ ಹಕ್ಕುಗಳನ್ನು, ಘನತೆ ಹಾಗೂ ಏಜೆನ್ಸಿಯನ್ನು ಸರ್ಕಾರ ನಿಜವಾಗಿಯೂ ಪ್ರತಿಪಾದಿಸಿದೆಯೇ?

# ಏಕರೂಪ ನಾಗರಿಕ ಸಂಹಿತೆ (ಯುಸಿಸಿ)

**“**ಯುಸಿಸಿ ಜಾರಿಯಾಗುವವರೆಗೂ ಜೆಂಡರ್ ಸಮಾನತೆ ಸಾಧ್ಯವಿಲ್ಲ. ಎಲ್ಲಾ ಸಮುದಾಯಗಳ ಮಹಿಳೆಯರಿಗೆ ಜೆಂಡರ್ ನ್ಯಾಯವನ್ನು ಯುಸಿಸಿ ತರಲಿದೆ.”

ಬಿಜೆಪಿ ಪ್ರಣಾಳಿಕೆ, 2019

## ವಾಸ್ತವ

**‘ಏಕರೂಪತೆ’ಗಿಂತ ಮಹಿಳಾ ಹಕ್ಕುಗಳಿಗೆ ಆದ್ಯತೆ ನೀಡುವ ‘ಸಮಾನತಾವಾದಿ’ (ಇಗ್ಯಾಲಿಟೇರಿಯನ್) ನಾಗರಿಕ ಸಂಹಿತೆ ಅಗತ್ಯ. ಈಗ ವಿವರಿಸಿರುವಂತಹ ಯುಸಿಸಿಯನ್ನು ರಾಷ್ಟ್ರದಾದ್ಯಂತ ಮಹಿಳಾ ಸಂಘಟನೆಗಳು ವಿರೋಧಿಸಿವೆ. ಏಕೆಂದರೆ, ಲಿಂಗತ್ವ ನ್ಯಾಯ ಒದಗಿಸುವುದಕ್ಕಿಂತ ಹೆಚ್ಚಾಗಿ ಸಮುದಾಯಗಳಾದ್ಯಂತ ಹಾಗೂ ಸಮುದಾಯಗಳೊಳಗೂ ಇದು ವಿಭಜಿಸುವಂತಹದ್ದು ಹಾಗೂ ಸಮುದಾಯಗಳನ್ನು ಗುರಿಯಾಗಿಸಿಕೊಳ್ಳುತ್ತದೆ.**

2018ರಲ್ಲಿ, ‘ ಏಕರೂಪ ನಾಗರಿಕ ಸಂಹಿತೆಯು ಈ ಹಂತದಲ್ಲಿ ಅಗತ್ಯವೂ ಅಲ್ಲ, ಅಪೇಕ್ಷಣೀಯವೂ ಅಲ್ಲ. ರಾಷ್ಟ್ರದ ಸೌಹಾರ್ದಕ್ಕೆ ಇದು ವಿರುದ್ಧದ ಪರಿಣಾಮ ಬೀರಬಹುದು’ ಎಂದು ಭಾರತದ 21ನೇ ಕಾನೂನು ಆಯೋಗ ಘೋಷಿಸಿತ್ತು. ‘ವೈಯಕ್ತಿಕ ಕಾನೂನುಗಳ ಸುಧಾರಣೆಯನ್ನು ತಿದ್ದುಪಡಿ ಮೂಲಕ ಮಾಡಬೇಕು, ಅವುಗಳನ್ನು ಬದಲಿಸುವ ಮೂಲಕ ಅಲ್ಲ’ ಎಂದೂ ಆಯೋಗ ಸಲಹೆ ನೀಡಿತ್ತು. ‘ಅಸಮಾನತೆಯ ಬುಡದಲ್ಲಿರುವುದು ತಾರತಮ್ಯ, ವಿಭಿನ್ನತೆಯಲ್ಲಲ್ಲ’ ಎಂದು ಗುರುತಿಸಿರುವ ಕಾನೂನು ಆಯೋಗವು ‘ಸಮುದಾಯಗಳ ನಡುವೆ ಅನ್ನುವುದಕ್ಕಿಂತ ಪ್ರತಿ ಧಾರ್ಮಿಕ ಸಮುದಾಯದೊಳಗೂ ಜೆಂಡರ್ ಸಮಾನತೆ’ಗೆ ಆದ್ಯತೆ ನೀಡಿದೆ.

ಇಷ್ಟು ಸ್ಪಷ್ಟವಾದ ತೀರ್ಮಾನದ ನಂತರವೂ, ‘ಸಾರ್ವಜನಿಕರು ಹಾಗೂ ಧಾರ್ಮಿಕ ಸಂಘಸಂಸ್ಥೆಗಳು’ ಸೇರಿದಂತೆ ಭಾಗೀದಾರರ ಅಭಿಪ್ರಾಯಗಳ ಸಂಗ್ರಹಕ್ಕೆ ಮುಂದಾಗಿ 22ನೇ ಕಾನೂನು ಆಯೋಗವು ಈ ವಿಚಾರವನ್ನು ಮರು ತೆರೆಯಿತು. ಆ ನಂತರ, 2024ರಲ್ಲಿ ಯುಸಿಸಿ ಯನ್ನು ಜಾರಿಗೆ ತಂದ ಮೊದಲ ರಾಜ್ಯವಾಯಿತು ಉತ್ತರಾಖಂಡ. ಉತ್ತರಾಖಂಡದ ಯುಸಿಸಿ ತಾರತಮ್ಯದ ಸಂಹಿತೆ ತಮ್ಮ ಆಯ್ಕೆಯ ಸಂಗಾತಿ ಜೊತೆಗೆ ಒಟ್ಟಿಗೆ ಬದುಕುವ ಮಹಿಳೆಯ ಹಕ್ಕನ್ನೂ ಇದು ಕಿತ್ತೊಯ್ಯುತ್ತದೆ. ಅನಧಿಕೃತ,ಅನೈತಿಕ ಪೊಲೀಸ್ ಗಿರಿಗೆ ಮಹಿಳೆಯರನ್ನು ಸಿಲುಕಿಸುವುದಲ್ಲದೆ ಪ್ರಭುತ್ವದ ಹೆಚ್ಚುತ್ತಿರುವ ಗಂಡಾಳಿಕೆಯ ನಿಯಂತ್ರಣದಡಿಯೂ ಸಿಲುಕಿಸಲಾಗುತ್ತದೆ.
ಅಲ್ಲದೆ:

**ಎಲ್ಲಾ ಧರ್ಮಗಳು ಹಾಗೂ ಸಮುದಾಯಗಳಿಗೆ ಯುಸಿಸಿ ಅನ್ವಯಿಸುತ್ತದೆ ಎಂಬ ಪ್ರತಿಪಾದನೆಗೆ ತದ್ವಿರುದ್ಧವಾಗಿ ಪರಿಶಿಷ್ಟ ಪಂಗಡಗಳನ್ನು (ಎಸ್ ಟಿ) ಇದರ ವ್ಯಾಪ್ತಿಯಿಂದ ಹೊರಗಿಡಲಾಗಿದೆ**

**ಹಿಂದೂ ಅವಿಭಜಿತ ಕುಟುಂಬ (ಎಚ್ ಯು ಎಫ್) ವೈಯಕ್ತಿಕ ಕಾನೂನುಗಳೊಳಗಿನ ಅಂತರ್ಗತ ತಾರತಮ್ಯದ ಕಡೆಗಣಿಕೆ**

**ಲಿಂಗತ್ವ ಸಮಾನತೆ ನಿರ್ವಹಣೆಗಾಗಿ ಆಸ್ತಿ, ವೈವಾಹಿಕ ಅಥವಾ ಸಹ ಜೀವನದ ಹಕ್ಕುಗಳಲ್ಲಿ ಯಾವುದೇ ಬದಲಾವಣೆ ಇಲ್ಲ**

**ದತ್ತು, ಪಾಲಕತ್ವ ಹಾಗೂ ಬಾಡಿಗೆ ತಾಯ್ತನದ ಬಗ್ಗೆ ಮೌನ**

# ತ್ರಿವಳಿ ತಲಾಖ್

"ತ್ರಿವಳಿ ತಲಾಖ್ ಹಾಗೂ ನಿಖಾ ಹಲಾಲಾ ಆಚರಣೆಯನ್ನು  ಮುಸ್ಲಿಂ ಮಹಿಳಾ (ವಿವಾಹದಲ್ಲಿನ ಹಕ್ಕುಗಳ ರಕ್ಷಣೆ) ಕಾಯಿದೆ 2019ರ ಮೂಲಕ ಭಾರತದಲ್ಲಿಅಕ್ರಮಗೊಳಿಸುವ ಮೂಲಕ ಮುಸ್ಲಿಂ ಮಹಿಳೆಯರ ಮೇಲಿನ ಚಾರಿತ್ರಿಕ ತಪ್ಪನ್ನು ಸರಿ ಪಡಿಸಲಾಗಿದೆ."

ವಾಸ್ತವ

# ತ್ರಿವಳಿ ತಲಾಖ್

2017ರಲ್ಲಿ  ಸಮುದಾಯದೊಳಗೇ ಸುಧಾರಣೆಗಾಗಿ ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ(ಬಿಎಂಎಂಎ)ದಂತಹ ಗುಂಪುಗಳ ಸುದೀರ್ಘ ಕಾಲದ ಪ್ರಚಾರಾಂದೋಲನದಿಂದಾಗಿ 2017ರಲ್ಲಿ ತ್ರಿವಳಿ ತಲಾಖ್ ಅನ್ನು ಸುಪ್ರೀಂ ಕೋರ್ಟ್ ಅಸಾಂವಿಧಾನಿಕ ಎಂದು ಘೋಷಿಸಿ ಬಹಿಷ್ಕರಿಸಿತು (ಶಾಯರಾ ಬಾನೊ ವರ್ಸಸ್  ಭಾರತ ಒಕ್ಕೂಟ).

2019ರ ಕಾಯಿದೆಯು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತ್ರಿವಳಿ ತಲಾಖ್ ಅನ್ನು ಮೂರು ವರ್ಷಗಳ ಜೈಲು ಶಿಕ್ಷೆ ಹಾಗೂ ದಂಡ ಇರುವಂತಹ ಶಿಕ್ಷಾರ್ಹ ಹಾಗೂ ಜಾಮೀನು ರಹಿತ ಅಪರಾಧವಾಗಿಸಿತು. ಈ ಕಾನೂನು ಜಾರಿಗೊಳಿಸುವ ಸಂದರ್ಭದಲ್ಲಿ, ಮುಸ್ಲಿಂ ಸಮುದಾಯದೊಳಗಿನ ಸ್ತ್ರೀದ್ವೇಷ ಹಾಗೂ ಅನ್ಯಾಯದ ಆಚರಣೆಗಳನ್ನು ಎತ್ತಿ ತೋರಿಸಲು, ತಮ್ಮದೇ ಸಮುದಾಯದೊಳಗಿನ ಸುಧಾರಣೆಗಳಿಗಾಗಿ ಮುಸ್ಲಿಂ ಮಹಿಳೆಯರೇ ನಡೆಸಿದ್ದ ಹೋರಾಟವನ್ನು ಸರ್ಕಾರ ತನ್ನಅನುಕೂಲಕ್ಕೆ ತನ್ನದಾಗಿ ಸ್ವಾಧೀನಪಡಿಸಿಕೊಂಡಿತು.

ವಾಸ್ತವಾಂಶ ಏನೆಂದರೆ, ಎಲ್ಲಾ ಸಮುದಾಯಗಳ ಪುರುಷರೂ ಕಾನೂನು ಉಲ್ಲಂಘಿಸುತ್ತಾರೆ, ದ್ವಿಪತ್ನಿತ್ವ ಆಚರಿಸುತ್ತಾರೆ ಹಾಗೂ ಜೀವನಾಂಶ ನೀಡದೆ ಪತ್ನಿಯರನ್ನು ಪರಿತ್ಯಜಿಸುತ್ತಾರೆ. ಆದರೆ ಅದೇ ಶಿಕ್ಷೆ ಅವರೆಲ್ಲರಿಗೂ ಅನ್ವಯಿಸುವುದಿಲ್ಲ.

# ಹೊಸ ಕ್ರಿಮಿನಲ್ ಕಾನೂನುಗಳು

ಅಪರಾಧ ಕಾನೂನು ತಿದ್ದುಪಡಿ ಕಾಯಿದೆ 2018 - ಅತ್ಯಾಚಾರದ ಕನಿಷ್ಠ ಶಿಕ್ಷೆಯನ್ನು ಏಳು ವರ್ಷಗಳಿಂದ ಹತ್ತು ವರ್ಷಗಳ ತೀವ್ರ ಶಿಕ್ಷೆಗೆ ಹೆಚ್ಚಿಸಿತು. ಇದನ್ನು ಜೀವಾವಧಿ ಸೆರೆವಾಸವಾಗಿಯೂ ವಿಸ್ತರಿಸಬಹುದು. 12 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯರ ಮೇಲಿನ ಅತ್ಯಾಚಾರ ಹಾಗೂ ಸಾಮೂಹಿಕ ಅತ್ಯಾಚಾರಕ್ಕೆ ಕನಿಷ್ಠ 20 ವರ್ಷಗಳ ಜೈಲುಶಿಕ್ಷೆ ಇದೆ. ಇದನ್ನು ಜೀವಾವಧಿ ಸೆರೆವಾಸ ಹಾಗೂ ಮರಣದಂಡನೆಯಾಗಿಯೂ ವಿಸ್ತರಿಸಬಹುದು.

ಅತ್ಯಾಚಾರ ಹಾಗೂ ಕೊಲೆಗಳಂತಹ ಹೀನ ಅಪರಾಧಗಳ ಪ್ರಕರಣಗಳಲ್ಲಿ ವಯಸ್ಕ ಅಪರಾಧಿಗಳಂತೆ ವಿಚಾರಣೆಗೆ ಒಳಪಡುವ ವಯಸ್ಸನ್ನು 18 ವರ್ಷಗಳಿಂದ 16 ವರ್ಷಗಳಿಗೆ ತಿದ್ದುಪಡಿಯಾದ ಬಾಲ ನ್ಯಾಯ ಕಾಯ್ದೆ (ಮಕ್ಕಳ ಪಾಲನೆ ಹಾಗೂ ರಕ್ಷಣೆ) ಇಳಿಸಿದೆ.

ಐಪಿಸಿ, ಸಿಆರ್ ಪಿಸಿ ಹಾಗೂ ಸಾಕ್ಷ್ಯ ಕಾಯ್ದೆ ಬದಲಿಗೆ 2023ರಲ್ಲಿ ಜಾರಿಗೊಳಿಸಲಾದ ಮೂರು ಹೊಸ ಕ್ರಿಮಿನಲ್ ಕಾನೂನುಗಳನ್ನು ಸಂತ್ರಸ್ತರಿಗೆ ನ್ಯಾಯ ಒದಗಿಸುವುದಕ್ಕಾಗಿ ಸಂತ್ರಸ್ತರನ್ನು ಕೇಂದ್ರಬಿಂದುವಾಗಿರಿಸಿಕೊಂಡು ರಚಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವಅಮಿತ್ ಶಾ ಪ್ರತಿಪಾದಿಸುತ್ತಾರೆ.

ವಾಸ್ತವಾಂಶ

# ಲೈಂಗಿಕ ಅಪರಾಧಗಳಿಗೆ ಅತ್ಯಂತ ತೀವ್ರತರ ಶಿಕ್ಷೆಗಾಗಿ  ಆಗ್ರಹಿಸುವುದರಲ್ಲಿ ಹಲವು ಸಮಸ್ಯೆಗಳಿವೆ

ಶಿಕ್ಷೆಯಾಗುವ ಪ್ರಮಾಣ, ಸದ್ಯಕ್ಕೆ

**26.5%**

%ನಷ್ಟು ಕಡಿಮೆ ಇದೆ.

ಹೀಗಿರುವಾಗ, ಶಿಕ್ಷೆಯನ್ನು ತೀವ್ರಗೊಳಿಸಿ ಅಪರಾಧವನ್ನು ತಗ್ಗಿಸುವುದು ಸಾಧ್ಯವಿಲ್ಲ.

ಲೈಂಗಿಕ ಅಪರಾಧಗಳಿಗೆ ಹೆಚ್ಚು ಕಠಿಣ ಶಿಕ್ಷೆಗೆ ಒತ್ತಾಯಿಸುವಲ್ಲಿ ಹಲವಾರು ಸಮಸ್ಯೆಗಳಿವೆ. ಮಹಿಳೆಯರು ಪುರುಷರ ಮರ್ಯಾದೆಯ ಸಾಕಾರ ಸ್ವರೂಪವಾಗಿದ್ದು ಮಹಿಳೆಯರ ಪಾವಿತ್ರ್ಯ ರಕ್ಷಣೆಯನ್ನು ಪುರುಷರು ಮಾಡಬೇಕು ಎಂಬ ಪರಿಕಲ್ಪನೆಯನ್ನು ಬಲಪಡಿಸುತ್ತದೆ.

ಶಿಕ್ಷೆಯ ತೀವ್ರತೆಗಿಂತ ಶಿಕ್ಷೆಯ ಖಚಿತತೆ ಹೆಚ್ಚು ಪರಿಣಾಮಕಾರಿಯಾದ ತಡೆಯಾಗಬಹುದು. ಮರಣ ದಂಡನೆಯು, ಕಾನೂನು ಆಯೋಗದ ಶಿಫಾರಸುಗಳಿಗೆ ವಿರುದ್ಧವಾಗಿದೆ. ಜೀವಾವಧಿ ಶಿಕ್ಷೆಗಿಂತಲೂ ಹೆಚ್ಚಿನ ಕಾನೂನಿನ ಭಯವನ್ನೇನೂ ಮರಣ ದಂಡನೆ ಸೃಷ್ಟಿಸದು ಎಂದು ನ್ಯಾಯಮೂರ್ತಿ ವರ್ಮಾ ಸಮಿತಿ ತೋರಿಸಿಕೊಟ್ಟಿದೆ. ಶಿಕ್ಷೆ ಹೆಚ್ಚು ತೀವ್ರವಾಗಿದ್ದಷ್ಟೂ ಶಿಕ್ಷೆಯಾಗುವ ಅವಕಾಶಗಳು ಕಡಿಮೆ. ಶಿಕ್ಷೆಯಾಗುವ ಪ್ರಮಾಣ, ಸದ್ಯಕ್ಕೆ 26.5%ನಷ್ಟು ಕಡಿಮೆ ಇದೆ. ಹೀಗಿರುವಾಗ, ಶಿಕ್ಷೆಯನ್ನು ತೀವ್ರಗೊಳಿಸಿ ಅಪರಾಧವನ್ನು ತಗ್ಗಿಸುವುದು ಸಾಧ್ಯವಿಲ್ಲ. ಶಿಕ್ಷೆ ಹೆಚ್ಚು ತೀವ್ರವಾಗಿದ್ದಷ್ಟೂ  ಶಿಕ್ಷೆಯಾಗುವ ಅವಕಾಶಗಳು ಕಡಿಮೆ.

ಕಳೆದ ಕೆಲವು ವರ್ಷಗಳಿಂದ, ಅತ್ಯಾಚಾರ ಆರೋಪಿಗಳಿಗೆ ಸಂತ್ರಸ್ತೆಯೊಂದಿಗೆ ವಿವಾಹದ ಷರತ್ತಿನ ಮೇಲೆ ಹಲವಾರು ಹೈಕೋರ್ಟ್‌ಗಳು ಜಾಮೀನು ನೀಡಿವೆ.
ಮೂರು ಹೊಸ ಕ್ರಿಮಿನಲ್ ಕಾನೂನುಗಳು ಈ ಅಭ್ಯಾಸವನ್ನು ಕಾನೂನುಬದ್ಧಗೊಳಿಸುವ ಮತ್ತು ಮದುವೆಯೊಳಗೆ ಲೈಂಗಿಕ ಹಿಂಸೆಯನ್ನು ಸಾಮಾನ್ಯಗೊಳಿಸುವ ಕಾನೂನು ಅಂತರವನ್ನು ಕಡೆಗಣಿಸುತ್ತವೆ.

# ಅಂತರಧರ್ಮೀಯ ಸಂಬಂಧಗಳನ್ನು ಅಪರಾಧವಾಗಿಸುವುದು



‘ಲವ್ ಜಿಹಾದ್’ ಎಂದರೆ ಭಾರತದ ವಿರುದ್ಧ ಮುಸ್ಲಿಮರ ವಿಸ್ತೃತ ಜನಾಂಗೀಯ ‘ಯುದ್ಧ’ದ ಭಾಗವಾಗಿ ಪ್ರೀತಿಯ ನೆಪದಲ್ಲಿ ಮುಸ್ಲಿಂ ಪುರುಷರು ಹಿಂದೂ ಹುಡುಗಿಯರನ್ನು ಮತಾಂತರ ಮಾಡುವಂತಹ ಪ್ರಚಾರಾಂದೋಲನ.

ಕರ್ನಾಟಕ, ಅರುಣಾಚಲ ಪ್ರದೇಶ, ಛತ್ತೀಸ್‌ಗಢ, ಗುಜರಾತ್, ಹರಿಯಾಣ, ಹಿಮಾಚಲ ಪ್ರದೇಶ, ಜಾರ್ಖಂಡ್, ಮಧ್ಯಪ್ರದೇಶ, ಒಡಿಶಾ, ರಾಜಸ್ಥಾನ, ಉತ್ತರಾಖಂಡ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಜಾರಿಗೊಳಿಸಲಾದ **ಮತಾಂತರ ವಿರೋಧಿ ಕಾನೂನುಗಳು** ಈ ವಿಷಯವನ್ನು ನಿಯಂತ್ರಿಸುತ್ತವೆ.

ವಾಸ್ತವಾಂಶ

# ಅಂತರಧರ್ಮೀಯ ಸಂಬಂಧಗಳನ್ನು ಅಪರಾಧವಾಗಿಸುವುದು

ಸಮ್ಮತಿ ಹೊಂದಿದ ಇಬ್ಬರು ವಯಸ್ಕರ ಮಧ್ಯದ ಅಂತರ ಧರ್ಮೀಯ ಸಂಬಂಧಗಳನ್ನು ಗುರಿಯಾಗಿಸಿಕೊಂಡು ರಾಜಕೀಯ ಸಾಧನವಾಗಿ ಬಲಪಂಥದ ಗುಂಪುಗಳು 'ಲವ್ ಜಿಹಾದ್' ಗುಮ್ಮನನ್ನು ಪದೇ ಪದೇ ಬಳಕೆ ಮಾಡಿಕೊಂಡಿವೆ. ಸದ್ಯದ ಕಾನೂನಿನಲ್ಲಿ 'ಲವ್ ಜಿಹಾದ್' ಅನ್ನು ಗುರುತಿಸಲಾಗಿಲ್ಲ ಎಂದು ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ 2020ರಲ್ಲಿ  ಸಂಸತ್ ನಲ್ಲಿ ಒಪ್ಪಿಕೊಂಡಿದೆ. ಹೀಗಿದ್ದೂ , ಅಂತರಧರ್ಮೀಯ ದಂಪತಿಗಳ ಕಿರುಕುಳ ಮುಂದುವರಿದಿದೆ.  ಎಲ್ಲಾ ಮತಾಂತರ ಹಾಗೂ ಅಂತರ ಧರ್ಮೀಯ ಸಂಬಂಧಗಳ ಮೇಲೆ ಮತಾಂತರ ವಿರೋಧಿ ಕಾನೂನಿನಿಂದಾಗಿ  ಶಂಕೆಯನ್ನು ವ್ಯಕ್ತಪಡಿಸುತ್ತಾ  ಅನೈತಿಕ ಪೊಲೀಸ್ ಗಿರಿಗೆ ಹಾಗೂ  ಜನಸಾಮಾನ್ಯರು ಅನಧಿಕೃತ ಕ್ರಮ ಕೈಗೊಳ್ಳುವುದಕ್ಕೂ  ಉತ್ತೇಜಿಸುವಂತಾಗಿದೆ.

lಅಂತರಧರ್ಮೀಯ ಸಂಬಂಧ/ ವಿವಾಹ ದಲ್ಲಿರುವ ವಯಸ್ಕ ಮಹಿಳೆಯರೆಲ್ಲಾ 'ಬಲಾತ್ಕಾರದ ಮತಾಂತರಗಳಿಂದ' ಮೋಸಹೋದ  ಸಂತ್ರಸ್ತೆಯರು ಎಂದು ಭಾವಿಸಿ ವಯಸ್ಕ ಮಹಿಳೆಯರನ್ನು ಏನೂ ಗೊತ್ತಿಲ್ಲದ ಚಿಕ್ಕಮಕ್ಕಳೆಂಬಂತೆ ಪರಿಭಾವಿಸಲಾಗುತ್ತಿದೆ. ಇದಕ್ಕೆ ಬದಲಾಗಿ, ಜಾತಿ, ಧರ್ಮ ಮೀರಿ ತಮ್ಮದೇ ಆಯ್ಕೆಯ ಸಂಗಾತಿ ಹೊಂದುವ ಹಕ್ಕು ಚಲಾಯಿಸುವ ಮಹಿಳೆಯರ ಭದ್ರತೆಗೆ ಇನ್ನೂ ಹೆಚ್ಚಿನ ಬೆದರಿಕೆ ಒಡ್ಡಿರುವ ಮರ್ಯಾದೆ(ಗೇಡು) ಹತ್ಯೆಗಳನ್ನು ಅಪರಾಧದ ವ್ಯಾಖ್ಯೆಗೆ ತರುವ ಕಾನೂನು ತರುವುದನ್ನು ಸರ್ಕಾರ ಪರಿಗಣಿಸಬೇಕು.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ಪ್ರಕಾರ, 2015 ಹಾಗೂ 2023ರ ಮಧ್ಯೆ ಭಾರತ ಇಂತಹ

**530**

ಹತ್ಯೆಗಳನ್ನು ಕಂಡಿದೆ. ಉತ್ತರ ಪ್ರದೇಶ, ಜಾರ್ಖಂಡ್, ಮಹಾರಾಷ್ಟ್ರ ಹಾಗೂ ಹರಿಯಾಣ ರಾಜ್ಯಗಳು ಮೊದಲಿನ ಸ್ಥಾನಗಳಲ್ಲಿವೆ.

**ಈ ಸರ್ಕಾರವು ಪರಿಚಯಿಸಿದ ಕೆಲವು ಶಾಸನಗಳು ಮಹಿಳಾ ಸಬಲೀಕರಣದ ಪ್ರತಿಗಾಮಿ ಮಾದರಿಯನ್ನು ಅನುಸರಿಸುತ್ತವೆ, ಅದು ಅತ್ಯುತ್ತಮವಾಗಿ ಪಿತೃಪ್ರಧಾನ ಮತ್ತು ಪಿತೃಪ್ರಧಾನ ಮತ್ತು ಕೆಟ್ಟದಾಗಿ ಕೋಮು ಮತ್ತು ಜಾತಿವಾದಿಯಾಗಿದೆ.**

*ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ

**“ಭಾರತದ ಆರ್ಥಿಕ ಪರಿವರ್ತನೆಯ ವಸ್ತ್ರದಲ್ಲಿ, ಮಹಿಳಾ ಆರ್ಥಿಕ ಸಬಲೀಕರಣದ ನಿರೂಪಣೆಯು ಬಲವಾದ ಎಳೆಯಾಗಿ ಹೊರಹೊಮ್ಮಿದೆ, ಪ್ರಗತಿ ಮತ್ತು ಬದಲಾವಣೆಯ ಬಟ್ಟೆಯ ಮೂಲಕ ನೇಯ್ಗೆಯಾಗಿದೆ.”**

narendramodi.in

# ಕಾರ್ಮಿಕ ರಂಗದಲ್ಲಿ ಪಾಲ್ಗೊಳ್ಳುವಿಕೆ ಹಾಗೂ ವೇತನ

ಮಹಿಳೆಯರು ಜನಸಂಖ್ಯೆಯ ಅರ್ಧದಷ್ಟಿದ್ದಾರೆ ಹಾಗೂ ಅವರ ಆರ್ಥಿಕ ಸಬಲೀಕರಣವು ದೇಶಕ್ಕೆ ದೊಡ್ಡ ಲಾಭವನ್ನು ತಂದುಕೊಡಲಿದೆ. ಮಹಿಳೆಯರ ಆರ್ಥಿಕ ಅಭಿವೃದ್ಧಿಗೆ ಸರ್ಕಾರದ ಪ್ರಮುಖ ಯೋಜನೆಗಳಿಂದಾಗಿರುವ ಪರಿಣಾಮಗಳೇನು?

ಹೆಚ್ಚಿದ ಆರ್ಥಿಕ ಬೆಳವಣಿಗೆಯ ಮಧ್ಯೆಯೂ ಕಾರ್ಮಿಕರಂಗದಲ್ಲಿ ಜೆಂಡರ್ ಅಂತರ ಹಾಗೇ ಉಳಿದಿದೆ. ಭಾರತದ ಔದ್ಯೋಗಿಕ ರಂಗದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಪ್ರಮಾಣ (ಫೀಮೇಲ್ ಲೇಬರ್ ಪಾರ್ಟಿಸಿಪೇಷನ್ ರೇಟ್ - ಎಫ್ ಎಲ್ ಪಿಆರ್) 2005ರಲ್ಲಿ

**32%**

ಇದ್ದದ್ದು 2021ರಲ್ಲಿ

**19%**

ಗೆ ಕುಸಿದಿದೆ

ಸ್ಥೂಲವಾಗಿ , ಭಾರತದಲ್ಲಿ 15-59 ವಯೋಮಾನದ ಶೇಕ ಡ

**60%**

ರಷ್ಟು ದುಡಿಯುವ ಮಹಿಳೆಯರು ಸ್ವಯಂ ಉದ್ಯೋಗಿಗಳು.
ಈ ಪೈಕಿ ಅರ್ಧಕ್ಕಿಂತ ಹೆಚ್ಚಿನ ಕೆಲಸ 'ವೇತನವಿಲ್ಲದ ಸಹಾಯಕರಾಗಿ' ಹಾಗೂ ಸುಮಾರು ಶೇಕಡ

**45%**

ಕೆಲಸ ' ಸ್ವಂತ ಲೆಕ್ಕದ ಕೆಲಸಗಾರರ'ರಾಗಿರುತ್ತಾರೆ (ಯಾರೇ ಕೂಲಿಗಳನ್ನು ನಿಯೋಜಿಸಿಕೊಳ್ಳದೆ ತಮ್ಮದೇ ಉದ್ದಿಮೆ ನಿರ್ವಹಿಸುತ್ತಾರೆ). ಸರಾಸರಿ ಲೆಕ್ಕದಲ್ಲಿ ಎಲ್ಲಾ ರೀತಿಯ ಉದ್ಯೋಗಗಳಲ್ಲೂ ಆದರೆ ವಿಶೇಷವಾಗಿ ಸ್ವಯಂ ಉದ್ಯೋಗ ರಂಗದಲ್ಲಿ ಮಹಿಳಾ ಕೆಲಸಗಾರರು ಪುರುಷರಿಗಿಂತ ಕಡಿಮೆ ಗಳಿಸುತ್ತಾರೆ.

ಎಫ್ ಎಲ್ ಪಿಆರ್ ನಲ್ಲಿ

**37%**

ನಷ್ಟು ಇತ್ತೀಚಿನ ಏರಿಕೆಯು ಸಕಾರಾತ್ಮಕ ಎಂದು ತೋರುತ್ತದೆ. ಆದರೆ ಇದು ಬಹುಮಟ್ಟಿಗೆ ಸಂಕಷ್ಟ ಸ್ಥಿತಿಯಲ್ಲಿನ ಕೆಲಸದಲ್ಲಿ ತೊಡಗುವಿಕೆ ಎಂದು ತಜ್ಞರು ಹೇಳುತ್ತಾರೆ. ಎಂದರೆ, ಮಹಿಳೆಯರು ಔದ್ಯೋಗಿಕ ರಂಗದ ಭಾಗವಾಗಿದ್ದಾರೆ. ಆದರೆ ಆರ್ಥಿಕ ಸಂಕಷ್ಟದಿಂದಾಗಿ ಕಡಿಮೆ ಅಥವಾ ಶೂನ್ಯ ಆದಾಯದ ಕೆಲಸಗಳನ್ನು ಆಶ್ರಯಿಸುತ್ತಿದ್ದಾರೆ.

ಜೊತೆಗೆ, ಮಹಿಳೆಯ ಆರ್ಥಿಕ ಸ್ಥಿತಿಗತಿಯ ಯಾವುದೇ ಸುಧಾರಣೆ ಎನ್ನುವುದಕ್ಕಿಂತ ಔದ್ಯೋಗಿಕ ರಂಗದಲ್ಲಿ ಮಹಿಳೆಯರ ಹೆಚ್ಚಿನ ಪಾಲ್ಗೊಳ್ಳುವಿಕೆಗೆ ಗ್ರಾಮೀಣ ಮಹಿಳೆಯರು ಕಾರಣ. ಭಾರತದಲ್ಲಿ ಅತಿಹೆಚ್ಚಿನ ಸಂಖ್ಯೆಯ ಮಹಿಳೆಯರು ಕಡಿಮೆ ಉತ್ಪಾದಕತೆಯ ತೀರಾ ಅನಿಶ್ಚಿತ ಉದ್ದಿಮೆ ಎನಿಸಿದ ಕೃಷಿ ಕ್ಷೇತ್ರದಲ್ಲಿ ಅನಿರ್ದಿಷ್ಟ ವೇತನದೊಂದಿಗೆ ಕೆಲಸ ಮಾಡುತ್ತಾರೆ. ಹೀಗಿದ್ದೂ ಶೇಕಡ 13ಕ್ಕಿಂತ ಕಡಿಮೆ ಮಹಿಳೆಯರು ಮಾತ್ರ ತಮ್ಮದೇ ಭೂಮಿ ಹೊಂದಿದ್ದಾರೆ.

ವಾಸ್ತವಾಂಶ

# ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ (ನರೇಗಾ)

ನರೇಗಾ ಕಾರ್ಮಿಕ ಶಕ್ತಿಯಲ್ಲಿ

**50%**

ಮಹಿಳೆಯರಿದ್ದಾರೆ.

**21** ಪ್ರಮುಖ ರಾಜ್ಯಗಳ ಪೈಕಿ **17** ರಾಜ್ಯಗಳಲ್ಲಿ ಕನಿಷ್ಠ ಕೃಷಿ ವೇತನಕ್ಕಿಂತ ನರೇಗಾ ವೇತನ ಕಡಿಮೆ ಇದ್ದರೂ ಆರ್ಥಿಕ ಕಷ್ಟಗಳು ಹಾಗೂ ಹೆಚ್ಚುತ್ತಿರುವ ನಿರುದ್ಯೋಗದಿಂದಾಗಿ ನರೇಗಾ ಕೆಲಸಗಳಿಗೆ ಬೇಡಿಕೆ ಹೆಚ್ಚಾಗಿದೆ.

ಹೀಗಿದ್ದೂ ಈ ಯೋಜನೆಯ ಹಣಕಾಸು ಹಂಚಿಕೆಯಲ್ಲಿ ಹೆಚ್ಚಿನ ಏರಿಕೆ ಆಗಲಿಲ್ಲ. 2023-24ರಲ್ಲಿ ಕೇವಲ

**₹60,000**

ಕೋಟಿಯನ್ನು ನರೇಗಾ ಯೋಜನೆಗೆ ಹಂಚಿಕೆ ಮಾಡಿತು. ಇದು ಅದರ ಹಿಂದಿನ ವರ್ಷದ ಪರಿಷ್ಕೃತ

**33%**

ಅಂದಾಜಿಗಿಂತ ಕಡಿಮೆ ಇತ್ತು!

ಹೀಗಾಗಿ ಕೆಲಸದ ಕೊರತೆ ಜೊತೆಗೆ ವೇತನ ಪಾವತಿಯ ವಿಳಂಬವು ಅಚ್ಚರಿಯದೇನೂ ಆಗಿರಲಿಲ್ಲ. ಪ್ರತೀ ಗ್ರಾಮೀಣ ಮನೆಗಳಿಗೆ 100 ದಿನಗಳ ಕೆಲಸವನ್ನು ಈ ಯೋಜನೆ ಖಚಿತ ಪಡಿಸಿದರೂ ಕಳೆದ 10 ವರ್ಷಗಳಲ್ಲಿ ಪ್ರತಿ ಮನೆಗೆ ಸರಾಸರಿ ಉದ್ಯೋಗವು

**52** ದಿನಗಳನ್ನು

ದಾಟಿಲ್ಲ. ಇದರಿಂದ ಮಹಿಳೆಯರು ಹೆಚ್ಚಿನ ತೊಂದರೆಗೊಳಗಾದವರು.

## SPENDING UNDER FLAGSHIP RURAL SCHEMES (₹ crore)

| | MGNREGA | | PMAY | Jal Jeevan Mission | PM-Kisan |
|---|---|---|---|---|---|
| | Outlay | Work done* | | | |
| 2012-13 | 30,274.72 | 230.46 | 7,868.77 | 10,489.91 | |
| 2013-14 | 32,994.12 | 220.37 | 12,981.65 | 9,691.29 | - |
| 2014-15 | 32,463.4 | 166.21 | 11,096.15 | 9,190.43 | - |
| 2015-16 | 37,340.71 | 235.15 | 11,603.45 | 4,369.55 | - |
| 2016-17 | 48,214.95 | 235.65 | 20,951.69 | 5,980.02 | - |
| 2017-18 | 55,166.04 | 233.74 | 31,163.6 | 7,037.96 | - |
| 2018-19 | 61,815.09 | 267.96 | 25,442.56 | 5,484.15 | 1,241.13 |
| 2019-20 | 71,686.7 | 265.35 | 24,963.65 | 10,030.42 | 48,713.84 |
| 2020-21 | 1,11,169.53 | 389.09 | 40,259.84 | 10,998.22 | 60,989.9 |
| 2021-22 | 98,467.85 | 363.24 | 90,019.91 | 63,125.7 | 66,825.11 |
| 2022-23** | 89,400 | 290-300@@ | 77,130.01 | 55,000 | 60,000 |
| 2023-24@ | 60,000 | NA | 79,590.03 | 70,000 | 60,000 |


**In crore person-days employment generated; **Revised Estimates; @Budget Estimates; @@Projected; PMAY and Jal Jeevan Mission were till 2014-15 and 2018-19 called National Rural Drinking Water Programme and Indira Awas Yojana respectively.*


ಮೂಲ: ಇಂಡಿಯನ್ ಎಕ್ಸ್‌ಪ್ರೆಸ್

ವಾಸ್ತವಾಂಶ

# ನರೇಗಾ

**Figure X and Y** caption



# ಪ್ರಧಾನ ಮಂತ್ರಿ ಜನ ಧನ್ ಯೋಜನೆ (ಪಿಎಂಜೆಡಿವೈ)

“50 ಕೋಟಿ ಹೊಸ ಜನ ಧನ್ ಖಾತೆಗಳನ್ನು ತೆರೆಯಲಾಗಿದೆ. ಇವುಗಳಲ್ಲಿ 56% ಮಹಿಳೆಯರದ್ದು. ಬ್ಯಾಂಕ್ ಖಾತೆ ಹೊಂದಿದ ಮನೆಗಳು ಶೇಕಡಾವಾರು ಹೆಚ್ಚಾಯಿತು.  2014ರಲ್ಲಿ 51% ಇದ್ದದ್ದು 2021ರಲ್ಲಿ 93%ಗೆ ಏರಿಕೆಯಾಯಿತು. ಇದು ಬ್ಯಾಂಕಿಂಗ್ ಸೇವೆಗಳಿಗೆ ಮಹಿಳೆಯರ ಸಂಪರ್ಕವನ್ನು ವಿಸ್ತರಿಸಿದೆ. ಜೊತೆಗೆ, ಭಾರತದಲ್ಲಿ ಮಹಿಳೆಯರ ಹಣಕಾಸು ಒಳಗೊಳ್ಳುವಿಕೆಯನ್ನು ಉತ್ತೇಜಿಸಿದೆ."

## ವಾಸ್ತವಾಂಶ

ಪ್ರಧಾನ ಮಂತ್ರಿ ಜನ ಧನ್ ಯೋಜನೆಯು ಮಹಿಳೆಯರ ಹಣಕಾಸು ಒಳಗೊಳ್ಳುವಿಕೆಗೆ ಶ್ಲಾಘನೀಯವಾದ ಕ್ರಮ. ಆದರೆ, ಪಿಎಂಜೆಡಿವೈನ ಕೇವಲ

**45%**

ಖಾತೆಗಳನ್ನು ಮಾತ್ರ ಹಣಕಾಸು ವಹಿವಾಟುಗಳಿಗೆ ಬಳಸಲಾಗಿದೆ.

ಈ ಖಾತೆಗಳಲ್ಲಿ ಅಂದಾಜು

**20%**

ನಿಷ್ಕ್ರಿಯವಾಗಿವೆ.

ಮಹಿಳೆಯರು ಖಾತೆ ಹೊಂದಿದವರಾಗಿದ್ದರೂ ಬ್ಯಾಂಕ್ ಗಳಿಂದ ಸಾಲ ಪಡೆದುಕೊಂಡವರಲ್ಲಿ

**30%**

ಗಿಂತ ಕಡಿಮೆ ಮಂದಿ ಮಹಿಳೆಯರು.

ತಮ್ಮ ಠೇವಣಿ ಮೌಲ್ಯದಲ್ಲಿ ಕೇವಲ

**27%**

ಮಾತ್ರ ಕ್ರೆಡಿಟ್ ಆಗಿ ಪಡೆಯುತ್ತಾರೆ. ಪುರುಷರಿಗೆ ಇದು 52% ಇದೆ.

**ಕೇವಲ ಖಾತೆ ತೆರೆಯುವುದು ಯೋಜನೆ ಎಷ್ಟು ಪರಿಣಾಮಕಾರಿ ಎಂದು ಅಳೆಯಲು ಒಳ್ಳೆಯ ಸಾಧನವಾಗದು. ನಿಜವಾದ ಹಣಕಾಸು ಒಳಗೊಳ್ಳುವಿಕೆಗೆ ಅಗತ್ಯ ಕ್ರಮಗಳು ಹಾಗೂ ಎಲ್ಲಾ ಖಾತೆದಾರರಿಗೆ ಬ್ಯಾಂಕಿಂಗ್ ಸೇವೆಗಳ ವ್ಯಾಪಕ ಬಳಕೆಯು ಅಗತ್ಯವಾಗುತ್ತದೆ.**

# ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್ ಆರ್ ಎಲ್ ಎಂ), ಪ್ರಧಾನ ಮಂತ್ರಿ ಮುದ್ರಾ ಯೋಜನೆ (ಪಿಎಂಎಂವೈ)

2011ರಲ್ಲಿ ಆರಂಭವಾದ ಎನ್‌ಆರ್ ಎಲ್‌ಎಂ ಬಡತನವನ್ನು ಕಡಿಮೆ ಮಾಡುವ ಉದ್ದೇಶ ಹೊಂದಿದೆ. ಗ್ರಾಮೀಣ ಸ್ವಸಹಾಯ ಸಂಘಗಳಿಗೆ (ಎಸ್‌ಎಚ್ ಜಿ) ಸಾಲಗಳ ಮೂಲಕ ಸುಸ್ಥಿರ ಜೀವನೋಪಾಯ ಅವಕಾಶಗಳನ್ನು ಒದಗಿಸಿಕೊಡಲು ಉತ್ತೇಜಿಸುತ್ತದೆ.

2015ರಲ್ಲಿ ಆರಂಭವಾದ ಪಿಎಂಎಂವೈ,, ಕಾರ್ಪೊರೇಟೇತರ, ಕೃಷಿಯೇತರ, ಸಣ್ಣ ಹಾಗೂ ಕಿರು ಉದ್ದಿಮೆಗಳಲ್ಲಿ ತೊಡಗಿಕೊಂಡಿರುವ ಮಹಿಳೆಯರಿಗೆ ಸಾಲ ಒದಗಿಸುತ್ತದೆ.

ಅಡಮಾನ ಮುಕ್ತ ಸಾಲಗಳಿಗಾಗಿ 9 ಕೋಟಿ ಮಹಿಳೆಯರನ್ನು 83.5 ಲಕ್ಷ ಗ್ರಾಮೀಣ ಎಸ್ ಎಚ್ ಜಿಗಳ ಜೊತೆಗೆ ಎನ್‌ಆರ್ ಎಲ್‌ಎಂ ಬೆಸೆದಿದೆ. 8 ವರ್ಷಗಳಲ್ಲಿ ಎಸ್‌ಎಚ್ ಜಿಗಳು ರೂ5.5 ಲಕ್ಷ ಕೋಟಿ ಹಣ ಪಡೆದುಕೊಂಡಿದ್ದು ಹೇರಳವಾದ ಅವಕಾಶಗಳನ್ನು ಸೃಷ್ಟಿಸಿದೆ.

ಪಿಎಂಎಂವೈ ಆರಂಭದಿಂದ 2023ರವರೆಗೆ 40.8 ಕೋಟಿ ಸಾಲ ಖಾತೆಗಳಲ್ಲಿ ರೂ 23.2 ಲಕ್ಷ ಕೋಟಿ ಮಂಜೂರು ಮಾಡಿದೆ. ಭಾರತದ ಒಟ್ಟಾರೆ ಕಿರು ಹಣಕಾಸು ಸಾಲ ಪೋರ್ಟ್ ಫೋಲಿಯೊ ರೂ 3,76,110 ಕೋಟಿ ಯಷ್ಟಿದ್ದು, 13.9 ಕೋಟಿ ಸಾಲ ಖಾತೆಗಳೊಂದಿಗೆ 7.1 ಕೋಟಿ ವಿಶಿಷ್ಟ ಸಾಲಗಾರರಿಗೆ ಸೇವೆ ಸಲ್ಲಿಸುತ್ತಿದೆ.

ವಾಸ್ತವಾಂಶ

# ಎನ್ ಆರ್ ಎಲ್ ಎಂ, ಪಿಎಂಎಂವೈ

ಎನ್‌ಆರ್ ಎಲ್‌ಎಂ ಹಾಗೂ ಪಿಎಂಎಂವೈ ಒಳ್ಳೆಯ ಉಪಕ್ರಮಗಳು. ಆದರೆ ಅವು ಕಿರು ಹಣಕಾಸು ಉದ್ದಿಮೆಯ ಸಣ್ಣ ಭಾಗವಾಗಿದ್ದು ಖಾಸಗಿ ಭಾಗಿದಾರರ ಹಿಡಿತದಲ್ಲಿದೆ. ವಿಶ್ವದಲ್ಲೇ ಅತಿ ಹೆಚ್ಚಿನ ಕಿರು  ಸಾಲ ಗ್ರಾಹಕರನ್ನು ಭಾರತ ಹೊಂದಿದ್ದು  85%ಗಿಂತ ಹೆಚ್ಚಿನ ಗ್ರಾಹಕರು ಮಹಿಳೆಯರು.
ಪ್ರಶ್ನಾರ್ಹ ಆಚರಣೆಗಳನ್ನು ಮಾಮೂಲಾಗಿ ಗಮನಕ್ಕೆ ತಂದರೂ  ಸರ್ಕಾರದ ಉಸ್ತುವಾರಿ ಹೆಚ್ಚೇನೂ ಇಲ್ಲದೆ ಕಿರು ಹಣಕಾಸು ಸಂಸ್ಥೆಗಳ ( ಎಂಎಫ್ಐ) ಅನಿರ್ಬಂಧಿತ ಬೆಳವಣಿಗೆಯು ಗಂಭೀರವಾದ ವಿಚಾರ.
ಖಾಸಗಿ ಕಿರು ಹಣಕಾಸು ಸಂಸ್ಥೆಗಳ ಆಕ್ರಮಣಕಾರಿ ಬಗೆಯ ಸಾಲ ನೀಡಿಕೆ ಹಾಗೂ ಸಾಲ ಮರುಪಾವತಿ ನೀತಿಗಳಿಂದಾಗಿ ಮಹಿಳೆಯರು ಕಷ್ಟಅನುಭವಿಸುವಂತಾಗಿದೆ. ಬಹುತೇಕ ಈ ಸಾಲಗಳು ಸುಸ್ಥಿರ ಜೀವನೋಪಾಯ ಸೃಷ್ಟಿಸುವುದಕ್ಕಿಂತ ಹೆಚ್ಚಾಗಿ ಗ್ರಾಹಕ ವಸ್ತುಗಳಿಗೆ ಹಾಗೂ ಸಾಲಗಳ ಮರುಪಾವತಿಗೆ ವಿನಿಯೋಗವಾಗುತ್ತವೆ.

ಎನ್‌ಆರ್ ಎಲ್‌ಎಂ ಅತಿ ಕಡಿಮೆ ಹಂಚಿಕೆಗಳನ್ನೇ ಪಡೆದುಕೊಂಡು ಬಂದಿದೆ. 2020-21ರಲ್ಲಿ ಅದು ಕೇವಲ 92,100 ದಶಲಕ್ಷ ರೂಪಾಯಿಗಳನ್ನು ಪಡೆದುಕೊಂಡಿತ್ತು. ಇದಕ್ಕೆ ಹೋಲಿಸಿದರೆ ನರೇಗಾ ಯೋಜನೆಗೆ ಹಂಚಿಕೆಯಾಗಿದ್ದ ಹಣ ರೂ 1,015,000 ದಶಲಕ್ಷ.

ಬಹುತೇಕ ಎಸ್‌ಎಚ್ ಜಿಗಳು ವಾಣಿಜ್ಯ ಚಟುವಟಿಕೆಗಳ ಉದ್ದೀಪಕಗಳಾಗುವ ಬದಲಿಗೆ ಲೇವಾದೇವಿಗಾರರಾಗಿ ಉಳಿದುಬಿಟ್ಟಿದ್ದವು. ಕಿರು ಹಣಕಾಸು ಯೋಜನೆಗಳು ಜೀವನೋಪಾಯ ಕಾರ್ಯತಂತ್ರಕ್ಕೆ ಬೆಸೆದುಕೊಂಡಿರದಿದ್ದಲ್ಲಿ, ಅದು ಮಹಿಳೆಯರನ್ನು ಬರೀ ಸಾಲದ ಸುಳಿಗೆ ಸಿಲುಕಿಸುತ್ತದೆ.

ಎಸ್‌ಎಚ್ ಜಿ ಸದಸ್ಯರು  ಬರೀ ಫಲಾನುಭವಿಗಳಾಗಿ ಉಳಿಯುತ್ತಾರೆ, ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅವರಿಗೆ ಯಾವುದೇ ನಿಯಂತ್ರಣ ಉಳಿಯುವುದಿಲ್ಲ.

ಪಿಎಂಎಂವೈ ನಿಂದ ಮಹಿಳೆಯರಿಗೆ ನಿಜವಾಗಲೂ ಅನುಕೂಲವಾಗಿದ್ದರೂ 2021ರಲ್ಲಿ ವಿತರಿಸಲಾದ 88% ಸಾಲಗಳು ಹಾಗೂ 2023ರಲ್ಲಿ ವಿತರಿಸಲಾದ 40% ಸಾಲಗಳು ರೂ 50,000ಕ್ಕಿಂತ ಕಡಿಮೆ ಇದ್ದವು ಅಥವಾ ಅವು 'ಸಣ್ಣ ಉದ್ದಿಮೆಗಳು'

# ಆಶಾ ಮತ್ತು ಇತರ ಸರ್ಕಾರಿ ಯೋಜನೆ ಕೆಲಸಗಾರರು

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳು ಹಾಗೂ ಕಾರ್ಯಕ್ರಮಗಳಲ್ಲಿ ಸುಮಾರು 50 ಲಕ್ಷ ಮಹಿಳೆಯರು ಕೆಲಸ ಮಾಡುತ್ತಾರೆ. ವಾಸ್ತವವಾಗಿ ಪೂರ್ಣಾವಧಿ ಕೆಲಸ ಮಾಡಿದರೂ, ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಪಾಲನೆಯ ಕೆಲಸಗಳು ಅಥವಾ ಅಂಗನವಾಡಿಗಳಲ್ಲಿ ಮಕ್ಕಳ ಪಾಲನೆಯಂತಹ ಮುಖ್ಯವಾದ ನಿರಂತರ ಕಾರ್ಯಗಳನ್ನು ಮಾಡಿದರೂ ಅವರೆಲ್ಲರನ್ನೂ ಸಾಮಾನ್ಯವಾಗಿ ' ಸ್ವಯಂಸೇವಕರು' ಅಥವಾ ' ಅರೆಕಾಲಿಕ ಕೆಲಸಗಾರರು ಎಂದು ವಿವರಿಸಲಾಗುತ್ತದೆ. ಗ್ರಾಮೀಣ ಬಡವರ ಆರೋಗ್ಯ ಸುಧಾರಣೆ ಉದ್ದೇಶ ಹೊಂದಿರುವ ಎನ್ಆರ್ ಎಚ್ಎಂ ಗೆ  ಆಶಾ ಅಥವಾ ಸಮುದಾಯ ಆಧಾರಿತ ಮಹಿಳಾ ಆರೋಗ್ಯ  ಕಾರ್ಯಕರ್ತರು ಮುಖ್ಯ.

**ಕೋವಿಡ್ ಸಾಂಕ್ರಾಮಿಕದ ನಂತರ, ರಕ್ಷಣಾತ್ಮಕ ಗ್ಲೋವ್ಸ್ ಗಳು, ಪಿಪಿಇ ಕಿಟ್ , ಮುಖಗವುಸು ಕೊರತೆ;  ವಿಳಂಬ ಹಣಪಾವತಿ ; ಬಡತನದ ಅಂಚಿಗೆ ದೂಡಿದಂತಹ  ಶೋಷಣಾತ್ಮಕ ಕೆಲಸದ ಸ್ಥಿತಿಗತಿಗಳ ವಿರುದ್ಧ   2022ರಿಂದ ರಾಷ್ಟ್ರದಾದ್ಯಂತ 6,00,000 ಕ್ಕೂ ಅಧಿಕ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸುತ್ತಲೇ ಬಂದಿದ್ದಾರೆ.**

ಸದ್ಯಕ್ಕೆ ಪ್ರೋತ್ಸಾಹ ಧನ ಆಧಾರಿತ ವೇತನಗಳನ್ನು ಪಡೆದುಕೊಳ್ಳುತ್ತಿರುವ ಅವರು ಕನಿಷ್ಠ ವೇತನ, ಸಾಮಾಜಿಕ ಭದ್ರತೆ ಮತ್ತಿತರ ಅನುಕೂಲಗಳ ಖಾತರಿಗಾಗಿ ತಮ್ಮ ಉದ್ಯೋಗವನ್ನುಔಪಚಾರಿಕಗೊಳಿಸಿ ಕ್ರಮಬದ್ಧಗೊಳಿಸಬೇಕೆಂದು ಒತ್ತಾಯಿಸುತ್ತಿದ್ದಾರೆ.

ಒಂದಷ್ಟು ಮಟ್ಟಿಗೆ ಈ ಯೋಜನೆಗಳು ಹಣಕಾಸು ಒಳಗೊಳ್ಳುವಿಕೆಯನ್ನು ಸಾಧ್ಯಮಾಡಿಸಿದ್ದರೂ ಇದು ಆರ್ಥಿಕ ಸಬಲೀಕರಣವಾಗಿ ಬದಲಾಗಿಲ್ಲ. ಮಹಿಳೆಯ ಕೆಲಸವನ್ನು ಆರೈಕೆಯ ಕೆಲಸ, ಗೃಹಕೃತ್ಯ ಹಾಗೂ ಸ್ವಯಂ ಸೇವೆಯ ಕೆಲಸವೆಂದು ನಿರೂಪಿಸುತ್ತಾ ಮಹಿಳೆಯರ ಕೆಲಸವನ್ನು ಕ್ಷುಲ್ಲಕೀಕರಿಸುವುದು ಹಾಗೂ ಕಡಿಮೆ ಮೌಲ್ಯದ್ದಾಗಿ ಪರಿಗಣಿಸುವುದು ಮುಂದುವರಿದಿದೆ. ಜೊತೆಗೆ, ಹಣಕಾಸು ಒಳಗೊಳ್ಳುವಿಕೆಯ ಹೆಸರಲ್ಲಿ, ಯಾವುದೇ ಸುಸ್ಥಿರ, ಘನತೆಯ ಉದ್ಯೋಗದ ಖಾತರಿ ಇಲ್ಲದಿದ್ದರೂ ಸಾಲದ ಭಾರಿ ಹೊರೆಯಲ್ಲಿ ಗ್ರಾಮೀಣ ಹಾಗೂ ನಗರದ ಬಡ ಮಹಿಳೆಯರು ಸಿಲುಕಿಕೊಳ್ಳುವಂತಾಗಿದೆ.

# ಸಾಮಾಜಿಕ ಸಬಲೀಕರಣ

"ಸಬ್ ಕಾ ಸಾಥ್ ಸಬ್ ಕಾ ವಿಕಾಸ್"
ಮಹಿಳೆಯರು 'ರಾಷ್ಟ್ರ ನಿರ್ಮಾಪಕರು' ಎಂದು 2024ರ ಪ್ರಣಾಳಿಕೆಯಲ್ಲಿ ಬಣ್ಣಿಸಿದ್ದ ಭಾರತೀಯ ಜನತಾ ಪಕ್ಷವು 'ಮಹಿಳೆಯರ ಸಬಲೀಕರಣ ಹಾಗೂ ಕ್ಷೇಮಾಭಿವೃದ್ಧಿಗಾಗಿ ಹೆಚ್ಚಿನ ಆದ್ಯತೆ ನೀಡಲು ಬದ್ಧ' ಎಂದು ಹೇಳಿಕೊಂಡಿತ್ತು. ಇದಕ್ಕಾಗಿ ಅನೇಕ ಪ್ರಮುಖ ಯೋಜನೆಗಳನ್ನು ಆರಂಭಿಸಲಾಗಿತ್ತು. ಇವುಗಳಲ್ಲಿ ಕೆಲವನ್ನು 'ಲಿಂಗತ್ವದ ಮಸೂರ'ದ ಮೂಲಕ ಇಲ್ಲಿ ಪರಿಶೀಲಿಸಲಾಗಿದೆ.

**ಸ್ವಚ್ಛ ಭಾರತಅಭಿಯಾನ (ಎಸ್ ಬಿಎ)**

2014ರಿಂದ 10 ಕೋಟಿ ಗೃಹ ಶೌಚಾಲಯಗಳನ್ನು ಗ್ರಾಮೀಣ ಭಾರತದಲ್ಲಿ ನಿರ್ಮಿಸಲಾಗಿದೆ. 2019ರಲ್ಲಿ ಭಾರತವು 'ಬಯಲು ಶೌಚ ಮುಕ್ತ' ( ಓಡಿಎಫ್) ಎಂದು ಪ್ರಧಾನಿಯವರು ಘೋಷಿಸಿದರು.

ವಾಸ್ತವಾಂಶ

# ಸ್ವಚ್ಛ ಭಾರತಅಭಿಯಾನ

ಗ್ರಾಮೀಣ ನೈರ್ಮಲ್ಯ, ಆರೋಗ್ಯ ಪರಿಣಾಮಗಳು ಹಾಗೂ ಮಹಿಳಾ ಸುರಕ್ಷತೆ ಬಗ್ಗೆ ಗಮನ ಕೇಂದ್ರೀಕರಣ ಸಕಾರಾತ್ಮಕ. ಆದರೆ, ತನ್ನ ಶ್ಲಾಘನೀಯ ಗುರಿಗಳನ್ನು ತಲುಪಲು ವಿಫಲವಾದ ಯೋಜನೆಗೆ, ಆ ವಿಫಲತೆ ಮರೆಮಾಚಲು ಮಹಿಳಾ ಸುರಕ್ಷತೆಯನ್ನು ಬಳಸಿಕೊಂಡಂತೆ ಕಾಣುತ್ತದೆ ಎಂಬುದು ಈ ಯೋಜನೆಯ ಸಾಧನೆಗಳು ಹಾಗೂ ನ್ಯೂನತೆಗಳ ಹೆಚ್ಚಿನ ವಾಸ್ತವಿಕ ಮೌಲ್ಯಮಾಪನದಲ್ಲಿ ಗೋಚರವಾಗುವ ಅಂಶ.

ಬಯಲು ಶೌಚ ಮುಕ್ತ ಎಂದು ಪ್ರತಿಪಾದಿಸಿಕೊಳ್ಳಲಾಗಿದ್ದರೂ ರಾಷ್ಟ್ರವನ್ನು **ಬಯಲು ಶೌಚ ಮುಕ್ತಗೊಳಿಸುವ ಗುರಿ** ಸಾಧನೆಯಲ್ಲಿ ಸ್ವಚ್ಛ ಭಾರತ ಅಭಿಯಾನ **ವಿಫಲವಾಗಿದೆ.**

ನಿರ್ಮಾಣವಾದ ಶೌಚಾಲಯಗಳ **ಕೆಳ ಗುಣಮಟ್ಟವನ್ನು** 2017 ಹಾಗೂ 2020ರಲ್ಲಿ ಸಂಸದೀಯ ಸಮಿತಿಗಳು ಎತ್ತಿ ಹೇಳಿವೆ.

ನೀರು ಸರಬರಾಜು, ಒಳಚರಂಡಿ ಸಂಸ್ಕರಣ/ ಮೂಲಸೌಕರ್ಯ, ನಡವಳಿಕೆ ಬದಲಾವಣೆ , ನಿರ್ವಹಣೆ ಮುಂತಾದ ಸಂಪೂರ್ಣ ಪರಿಹಾರಗಳ ಮೇಲಿರಬೇಕಾಗಿದ್ದಂತಹ ಗಮನವು ಶೌಚಾಲಯ ನಿರ್ಮಾಣದ ಮೇಲಿದೆ.

**ಹಲವು ಗ್ರಾಮಗಳಲ್ಲಿ ಶೌಚಾಲಯ ಬಳಕೆ ನಿಲ್ಲಿಸುವುದರ ಹಿಂದಿನ ಮುಖ್ಯಅಂಶಗಳಲ್ಲಿ ನೀರಿನ ಕೊರತೆಯೂ ಒಂದು.**

ಉದಾಹರಣೆಗೆ, ಶೇಕಡ

**83%**

ಗ್ರಾಮೀಣ ಮನೆಗಳು ಸಮುದಾಯ ನೀರಿನ ಮೂಲಗಳನ್ನು ಅವಲಂಬಿಸಿವೆ ಎಂದು 2018ರ ಸಿಎಜಿ ವರದಿ ಪ್ರತಿಪಾದಿಸಿದೆ.

**86%**

ಜನರು ತಾವು ಗುಂಡಿಯನ್ನು ಸ್ವಚ್ಛಗೊಳಿಸಲು ಮಲ ಹೊರುವವರನ್ನು ಕರೆಯುತ್ತೇವೆ ಎಂಬಂತಹ ಮಾಹಿತಿಯನ್ನು ಹಂಚಿಕೊಂಡರು. ಈ ಜಾತಿ ಆಧಾರಿತ ವೃತ್ತಿ ಈಗಲೂ ಅಸ್ತಿತ್ವದಲ್ಲಿದ್ದು ಮುಂದುವರಿಯುತ್ತಿರುವುದಕ್ಕೆ ಇದು ದ್ಯೋತಕ.

ಬಡತನ ರೇಖೆಯಿಂದ ಕೆಳಗಿರುವ (ಬಿಪಿಎಲ್) ಮನೆಗಳು ಹಾಗೂ ಬಡತನ ರೇಖೆಯಿಂದ ಮೇಲಿರುವ ಆಯ್ದ ಮನೆಗಳ ಶೌಚಾಲಯಗಳನ್ನು ನಿರ್ಮಾಣ ಮಾಡಲು ಈ ಯೋಜನೆ ಕೇವಲ ಹಣಕಾಸು ನೆರವು ಒದಗಿಸುತ್ತದೆ ಎಂದು 15ನೇ ಹಣಕಾಸು ಆಯೋಗವೂ ಹೇಳಿದೆ. ಬಿಪಿಎಲ್ ಮನೆಗಳನ್ನು ಪತ್ತೆ ಹಚ್ಚುವಲ್ಲಿ ಕೆಲವೊಂದು ಹೊರಗಿಡುವಿಕೆಯ ಗಣನೀಯ ತಪ್ಪುಗಳಿದ್ದವು ಎಂಬುದನ್ನೂ ಇದು ಎತ್ತಿ ಹೇಳಿರುವುದಲ್ಲದೆ 100% ಬಯಲು ಶೌಚಾಲಯ ಮುಕ್ತ ಸಾಧನೆಗಾಗಿ ಈ ಯೋಜನೆಯ ಸಾರ್ವತ್ರೀಕರಣಕ್ಕೂ ಶಿಫಾರಸು ಮಾಡಿದೆ.

# ಪ್ರಧಾನ ಮಂತ್ರಿ ಉಜ್ವಲ ಯೋಜನೆ (ಪಿಎಂಯುವೈ)

ಗ್ರಾಮೀಣ ಮಹಿಳೆಯ ಆರೋಗ್ಯ ಸುಧಾರಣೆ ಹಾಗೂ ಪರಿಸರವನ್ನು ರಕ್ಷಿಸುವುದಕ್ಕಾಗಿ ಪ್ರತೀ ಗ್ರಾಮೀಣ ಮನೆಗೆ ಸ್ವಚ್ಛ ಇಂಧನ ಒದಗಿಸುವುದಕ್ಕಾಗಿ ಪಿಎಂಯುವೈ ಅನ್ನು ಸರ್ಕಾರ ಆರಂಭಿಸಿತು. ಈ ಯೋಜನೆಯು ಈಗಾಗಲೇ ಎಲ್ ಪಿಜಿ ಸಂಪರ್ಕ ಹೊಂದಿರದ ಬಡ ಗ್ರಾಮೀಣ ಮಹಿಳೆಗೆ ಉಚಿತ ಎಲ್ ಪಿಜಿ ಸಿಲಿಂಡರ್ ಒದಗಿಸುತ್ತದೆ.

“ಬಿಪಿಎಲ್ ಕುಟುಂಬಗಳಿಗೆ ಸುಮಾರು 9.59 ಕೋಟಿ ಠೇವಣಿ -ಮುಕ್ತ ಎಲ್ ಪಿಜಿ ಸಂಪರ್ಕಗಳನ್ನು ವಿತರಿಸಲಾಗಿದೆ. ಎಲ್ ಪಿಜಿ ಹೊಂದಿರುವವರ ಪ್ರಮಾಣ 2016ರಲ್ಲಿ 62% ಇದ್ದದ್ದು 2023ರಲ್ಲಿ 105.4% ಗೆ ಏರಿದೆ”

## ವಾಸ್ತವಾಂಶ

# ಪ್ರಧಾನ ಮಂತ್ರಿ ಉಜ್ವಲ ಯೋಜನೆ

ಸರ್ಕಾರವು ಹೆಚ್ಚಿನ ಗ್ರಾಮೀಣ ಮನೆಗಳಿಗೆ ಎಲ್ ಪಿಜಿ ಸಿಲಿಂಡರ್ ಗಳನ್ನು ವಿತರಿಸಿದ್ದರೂ **( 80 ಲಕ್ಷ ಕೋಟಿ ವೆಚ್ಚದಲ್ಲಿ)** , ಎಲ್ ಪಿಜಿ ಬೆಲೆ ಭಾರಿ ಪ್ರಮಾಣದಲ್ಲಿ ಏರಿಕೆ ಕಂಡಿದ್ದು ಮನೆ ಖರ್ಚಿನ ವೆಚ್ಚವನ್ನು ತೀವ್ರವಾಗಿ ಹೆಚ್ಚಿಸಿದೆ. ಇದರಿಂದಾಗಿ, ಎಲ್ ಪಿಜಿ , ಬಹುತೇಕ ಫಲಾನುಭವಿಗಳ ಪ್ರಾಥಮಿಕ ಇಂಧನ ಮೂಲವಾಗಿಲ್ಲ.

**2018 ರಿಂದ 2023 ರವರೆಗೆ ಎಲ್ ಪಿಜಿ ಸಿಲಿಂಡರ್ ದರಗಳು 82% ಏರಿಕೆ ಕಂಡಿವೆ. 2018ರ ಜನವರಿಯಲ್ಲಿ ₹495.64 ಇದ್ದ ದರ 2023ರ ಮಾರ್ಚ್ ನಲ್ಲಿ ₹903ಕ್ಕೆ ಏರಿಕೆಯಾಗಿದೆ.** ಹಲವು ವರ್ಷಗಳ ಹಿಂದೆ ಸದ್ದಿಲ್ಲದೆಯೇ ಆರಂಭದಲ್ಲಿ ನೀಡಿದ ಸಬ್ಸಿಡಿಯನ್ನು ಹಿಂತೆಗೆದುಕೊಂಡ ನಂತರ, 2023ರ ಸೆಪ್ಟೆಂಬರ್ ನಲ್ಲಿ ತಲಾ ಸಿಲಿಂಡರ್ ಗೆ ರೂ 200 ಅನ್ನು ಸರ್ಕಾರ ಮತ್ತೆ ನೀಡಿತು. ಆದರೆ ಇದರ ಪರಿಣಾಮವನ್ನಿನ್ನೂ ಗಮನಿಸಬೇಕಿದೆ.

ಪಿಎಂಯುವೈ ಫಲಾನುಭವಿಗಳು, ಭಾರತದ ಸರಾಸರಿ ಆದ 6-7 ರೀಫಿಲ್ ಸಿಲಿಂಡರ್ ಗಳ ಬದಲಿಗೆ 3 ರೀಫಿಲ್ ಗಳಿಗೂ ಕಡಿಮೆ ಸಿಲಿಂಡರ್ ಗಳನ್ನು ತೆಗೆದುಕೊಂಡಿದ್ದಾರೆ.

ಗ್ರಾಮೀಣ ಪ್ರದೇಶದ 50% ಮನೆಗಳು ಹಾಗೂ ನಗರ ಪ್ರದೇಶಗಳ 92% ಮನೆಗಳು ಸ್ವಚ್ಛ ಇಂಧನವನ್ನು ಪ್ರಾಥಮಿಕ ಇಂಧನ ಮೂಲವಾಗಿ ಅಡುಗೆಗೆ ಬಳಸುತ್ತವೆ..

ಸಿಎಜಿ ಲೆಕ್ಕಪತ್ರ ವರದಿ ಕಂಡುಕೊಂಡಿರುವ ಅಂಶಗಳು:

- 1.9 ಲಕ್ಷ ಪ್ರಕರಣಗಳಲ್ಲಿ ಎಲ್ ಪಿಜಿ ಸಂಪರ್ಕಗಳನ್ನು ಪುರುಷರಿಗೆ ನೀಡಲಾಗಿದೆ.
- ಒಂದು ತಿಂಗಳಲ್ಲಿ 3ರಿಂದ 41 ಸಿಲಿಂಡರ್ ಗಳನ್ನು 14 ಲಕ್ಷ ಫಲಾನುಭವಿಗಳು ಬಳಸಿದ್ದಾರೆ ಹಾಗೂ ಸುಮಾರು 2 ಲಕ್ಷ ಫಲಾನುಭವಿಗಳು ವಾರ್ಷಿಕ 12 ಕ್ಕಿಂತ ಹೆಚ್ಚಿನ ಸಿಲಿಂಡರ್ ಗಳನ್ನು ಬಳಸಿದ್ದಾರೆ ಎಂಬುದು ಸಬ್ಸಿಡಿಯುಕ್ತ ಸಿಲಿಂಡರ್ ಗಳು ವಾಣಿಜ್ಯ ಉದ್ದೇಶಗಳಿಗೆ ಬಳಕೆಯಾಗುತ್ತವೆ ಎಂಬುದನ್ನು ಸೂಚಿಸುತ್ತಿವೆ.
- ಯೋಜನೆಗೆ ಸಂಬಂಧಿಸಿದ ಪರಿಣಾಮಗಳ ಮೌಲ್ಯಮಾಪನ ಮಾಡಲು ಮಾನದಂಡಗಳೇ ಇಲ್ಲ, .ಅರ್ಧಕ್ಕಿಂತ ಹೆಚ್ಚಿನ ಗ್ರಾಮ ಭಾರತ ಈಗಲೂ ಮಾಲಿನ್ಯಯುಕ್ತ ಘನ ಇಂಧನಗಳನ್ನು ಬಳಸುತ್ತದೆ ಎಂಬುದನ್ನು ಸರ್ಕಾರದ್ದೇ ಸ್ವಂತ ಆರೋಗ್ಯ ಸಮೀಕ್ಷೆಗಳು ತೋರಿಸಿಕೊಟ್ಟಿವೆ.

# ಬೇಟಿ ಬಚಾವೊ ಬೇಟಿ ಪಢಾವೊ (ಬಿಬಿಬಿಪಿ)

2015ರಲ್ಲಿ ಆರಂಭವಾದ ಬೇಟಿ ಬಚಾವೊ ಬೇಟಿ ಪಢಾವೊ ಯೋಜನೆಯು, ಹೆಣ್ಣುಮಗು ವಿರುದ್ಧದ ಲಿಂಗ ತಾರತಮ್ಯ ನಿರ್ವಹಿಸಿ ಬದಲಾವಣೆ ತರುವಂತಹ ಉಪಕ್ರಮ ಎಂದು ಶ್ಲಾಘಿಸಲಾಗಿತ್ತು. ಜನನ ವೇಳೆ ಲಿಂಗಾನುಪಾತ 2014ರಲ್ಲಿ 1000 ಗಂಡುಮಕ್ಕಳಿಗೆ 918 ಹೆಣ್ಣುಮಕ್ಕಳು ಇದ್ದದ್ದು 2023ರಲ್ಲಿ 1020 ಹೆಣ್ಣುಮಕ್ಕಳಿಗೆ ಏರಿಕೆಯಾಯಿತು. ಜಾಗತಿಕ ನೆಲೆಯಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಭಾರತದ ಸ್ಥಿತಿ 2018ರಿಂದ ಸಾಕಷ್ಟು ಮೇಲ್ಮುಖ ಹಾದಿಯಲ್ಲೇ ಇದೆ. 'ಬೇಟಿ ಬಚಾವೊ ಬೇಟಿ ಪಢಾವೊ'ದಂತಹ ಸರ್ಕಾರದ ಉಪಕ್ರಮಗಳು ಇದಕ್ಕೆ ಕಾರಣ.

ವಾಸ್ತವಾಂಶ

# ಬೇಟಿ ಬಚಾವೊ ಬೇಟಿ ಪಢಾವೊ

‘ಈ ಕಾರ್ಯಕ್ರಮವು ಆರಂಭದಲ್ಲಿ ಜಾರಿಯಾದ 161 ಜಿಲ್ಲೆಗಳಲ್ಲಿ ಅನುಷ್ಠಾನ ಪ್ರಕ್ರಿಯೆಯಲ್ಲಿಯೇ ದೋಷಗಳನ್ನು ಎನ್ ಸಿಎಇಆರ್ 2020ರಲ್ಲಿ ಬೇಟಿ ಬಚಾವೊ ಬೇಟಿ ಪಢಾವೊ’ ಕಾರ್ಯಕ್ರಮಗಳ ಮೌಲ್ಯಮಾಪನಕ್ಕಾಗಿ ನಡೆಸಿದ ಅಧ್ಯಯನದಲ್ಲಿ ಕಂಡುಕೊಂಡಿತ್ತು. ಶಾಲೆಗಳಿಗೆ ಬಾಲಕಿಯರ ಪ್ರವೇಶ ಹಾಗೂ ಶಾಲೆಯನ್ನು ಮಧ್ಯದಲ್ಲೇ ಬಿಡದಂತೆ ಮಾಡಲು ಇರುವ ಸ್ವರೂಪಾತ್ಮಕ ಅಡೆತಡೆಗಳನ್ನು ಈ ವರದಿ ಗುರುತಿಸಿತ್ತು.
2017-18 ರಿಂದ 2022-23ರವರೆಗೆ 55.3% ನಷ್ಟು ಹಣ ಬಳಕೆಯಾಗದೆ ಉಳಿದಿತ್ತು, 2022-23ರ ಹಣಕಾಸು ವರ್ಷದಲ್ಲಿ 77% ನಷ್ಟು ಭಾರಿ ಮೊತ್ತ ಬಳಕೆಯಾಗದೆ ಉಳಿದಿತ್ತು.

2014 ಹಾಗೂ 2021ರ ಮಧ್ಯೆ, ಬಿಬಿಬಿಪಿ ಯೋಜನೆಗೆ ಹಂಚಿಕೆಯಾದ 58% ನಷ್ಟು ಹಣ ಮಾಧ್ಯಮ ವಕಾಲತುಗಳಿಗೆ ವ್ಯಯಿಸಲಾಗಿದೆ.
ಹಣಕಾಸಿನ ಸರಿಯಾದ ಬಳಕೆ ಆಗದಿರುವುದನ್ನು 2021 ಡಿಸೆಂಬರ್ ನಲ್ಲಿ ಸಂಸದೀಯ ಸಮಿತಿ ಎತ್ತಿ ಹೇಳಿತ್ತು. ಯೋಜನೆ ಜಾಹೀರಾತಿನ ಬಗ್ಗೆ ಸರ್ಕಾರ ಗಮನ ಕೇಂದ್ರೀಕರಿಸುವುದರ ಬದಲಿಗೆ ಶಿಕ್ಷಣ ಹಾಗೂ ಆರೋಗ್ಯದ ವಿಚಾರದಲ್ಲಿ ವಲಯವಾರು ಮಧ್ಯಪ್ರವೇಶಕ್ಕೆ ಸರ್ಕಾರ ಹೆಚ್ಚಿನ ಗಮನ ಹರಿಸಬೇಕು ಎಂದು ಸಲಹೆ ನೀಡಿತ್ತು.
**2023ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಲಿಂಗಾನುಪಾತ 1037 ಇದ್ದರೆ, ನಗರ ಪ್ರದೇಶಗಳಲ್ಲಿ 985 ಇತ್ತು**. ನಗರ ಪ್ರದೇಶಗಳಲ್ಲಿ ಲಿಂಗ ಪತ್ತೆ ಪರೀಕ್ಷೆಗಳು ಸಕ್ರಿಯವಾಗಿ ಮುಂದುವರಿದಿರುವುದನ್ನು ಇದು ಸೂಚಿಸುತ್ತದೆ.

ವಿಶ್ವ ಆರ್ಥಿಕ ವೇದಿಕೆ ಸಿದ್ಧಪಡಿಸಿರುವ 2022ರ ಜಾಗತಿಕ ಲಿಂಗತ್ವಅಂತರ ವರದಿಯಲ್ಲಿ ಮಹಿಳಾ ಶಿಕ್ಷಣದ ವಿಚಾರದಲ್ಲಿ 146 ರಾಷ್ಟ್ರಗಳ ಪೈಕಿ ಭಾರತಕ್ಕೆ ಸಿಕ್ಕಿದ ಶ್ರೇಯಾಂಕ 107. ಸಾಕ್ಷರತೆ ಮತ್ತು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಇದು ಒಳಗೊಳ್ಳುತ್ತದೆ.
ಸುಮಾರು 40% ಹದಿಹರೆಯದ ಹುಡುಗಿಯರು ಶಾಲೆಯಿಂದ ಹೊರಗಿರುವುದು ಮುಂದುವರಿದಿದೆ ಹಾಗೂ ಈ ಗುಂಪಿನ ಬಹುತೇಕ 65% ಜನರು ಗೃಹಕೃತ್ಯದಲ್ಲಿ ತೊಡಗಿಕೊಂಡಿದ್ದಾರೆ.

**ಹೆಸರಿಸಲಾದ ಯೋಜನೆಗಳು ಕಾಗದದಲ್ಲಿ ಆಕರ್ಷಕವಾಗಿ ಕಂಡರೂ ಕೆಲವೊಂದು ಗುರಿಗಳನ್ನು ಮುಟ್ಟಲಾಗಿದ್ದರೂ ‘ಫಲಾನುಭವಿ’ಗಳ ಬದುಕಿನಲ್ಲಿ ರಚನಾತ್ಮಕ ಹಾಗೂ ಸಾಂಸ್ಥಿಕ ಬದಲಾವಣೆಗಳಿಗಿಂತ ಹೆಚ್ಚಾಗಿ ಅದರ ಸುತ್ತ ನಡೆದಿರುವ ಪ್ರಚಾರದ ಆರ್ಭಟವೇ ಜಾಸ್ತಿಯಾಗಿದೆ.**

# ರಾಜಕೀಯ ಸಬಲೀಕರಣ



"ಮಹಿಳಾ ಮೀಸಲು ಮಸೂದೆ 2023 ಅಥವಾ ನಾರಿ ಶಕ್ತಿ ವಂದನ ಅಧಿನಿಯಮವು ಶಾಸನಸಭೆಗಳಲ್ಲಿ ಮಹಿಳೆಯರ ಸಮಾನ ಪಾಲ್ಗೊಳ್ಳುವಿಕೆಗೆ ಬಿಜೆಪಿಯ ಬದ್ಧತೆಯನ್ನು ಪ್ರದರ್ಶಿಸುತ್ತದೆ ಹಾಗೂ ಮಹಿಳಾ ನೇತೃತ್ವದ ಅಭಿವೃದ್ಧಿಗೆ ಸರ್ಕಾರದ ಮುನ್ನೋಟಕ್ಕೆ ಹಾದಿಯನ್ನು ತೆರೆಯುತ್ತದೆ."

# ರಾಜಕೀಯ ಅಶಕ್ತೀಕರಣ




ಸಂಸತ್ತಿನಲ್ಲಿ ನ್ಯಾಯಯುತ ಮಹಿಳಾ ಪ್ರಾತಿನಿಧ್ಯವನ್ನು ಬೆಂಬಲಿಸುವುದಾಗಿ ಬಿಜೆಪಿ ಪ್ರತಿಪಾದಿಸಿಕೊಂಡರೂ ಇದು **ಸ್ಥಳೀಯ, ರಾಜ್ಯ ಅಥವಾ ರಾಷ್ಟ್ರ ಮಟ್ಟದಲ್ಲಿ ಚುನಾವಣೆಗಳಿಗೆ ಟಿಕೆಟ್ ಗಳನ್ನು ನೀಡುವ ಸಂದರ್ಭದಲ್ಲಿ ಎಂದಿಗೂ ಮಹಿಳೆಯರಿಗೆ 33% ನಷ್ಟು ಟಿಕೆಟ್ ನೀಡಿಲ್ಲ**.

2023ರ ಮಹಿಳಾ ಮೀಸಲು ಮಸೂದೆ ಮೂಲಕ, ಸದ್ಯದಲ್ಲಿ ನಡೆಯುವ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆ ಚುನಾವಣೆಗಳಲ್ಲಿ ಮಹಿಳಾ ಮತದಾರರ ಮನ ಒಲಿಸಿಕೊಳ್ಳುವ ಉದ್ದೇಶವನ್ನು ಬಿಜೆಪಿ ಹೊಂದಿದೆ. ಕನಿಷ್ಠ ಇನ್ನೂ ಐದು ವರ್ಷಗಳ ಕಾಲ, ಕ್ಷೇತ್ರ ಪುನರ್ವಿಂಗಡಣೆ ಆಗುವವರೆಗೂ ಈ ಮಸೂದೆ ಜಾರಿಗೆ ಬರುವುದು ಸಾಧ್ಯವಿಲ್ಲ. ಹೀಗಾಗಿ ನಗದೀಕರಿಸುವುದು ಸಾಧ್ಯವೇ ಇಲ್ಲದ 'ಪೋಸ್ಟ್ ಡೆಟೆಡ್ ಚೆಕ್' ಇದು.

ಸಂವಿಧಾನದ 243 ಡಿ ವಿಧಿ, ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಸ್ಥಾನ ಮೀಸಲಿಗೆ ಅವಕಾಶ ಒದಗಿಸುತ್ತದೆ. ದುರದೃಷ್ಟವಶಾತ್ , 2015ರಲ್ಲಿ ಬಿಜೆಪಿ ಆಡಳಿತವಿದ್ದ ರಾಜಸ್ಥಾನ ಹಾಗೂ ಹರಿಯಾಣದಲ್ಲಿ ಪಂಚಾಯತ್ ರಾಜ್ ಕಾಯ್ದೆಗೆ ಮಾಡಲಾದ ತಿದ್ದುಪಡಿಗಳು ಚುನಾವಣೆಗಳಲ್ಲಿ ಸ್ಪರ್ಧಿಸುವ ಬಹುಸಂಖ್ಯೆಯ ಮಹಿಳೆಯರ ಸಾಂವಿಧಾನಿಕ ಹಕ್ಕುಗಳನ್ನು ಕಿತ್ತು ಕೊಳ್ಳುತ್ತವೆ. ಪಂಚಾಯತ್ ಚುನಾವಣೆಗಳಲ್ಲಿ ಸ್ಪರ್ಧಿಸಲು ಕನಿಷ್ಠ ವಿದ್ಯಾರ್ಹತೆಯನ್ನು ಈ ಕಾಯ್ದೆಗಳು ನಿಗದಿ ಪಡಿಸಿದ್ದು, ಗಣನೀಯ ಸಂಖ್ಯೆಯ ಮಹಿಳೆಯರು ಅನರ್ಹಗೊಳ್ಳುತ್ತಾರೆ.

**113 ಶಾಸಕರು ಹಾಗೂ 21 ಎಂಪಿಗಳ** ವಿರುದ್ಧ ಮಹಿಳೆ ಮೇಲೆ ನಡೆಸಿದ ಘೋಷಿತ ಅಪರಾಧ ಪ್ರಕರಣಗಳಿವೆ ಎಂಬುದನ್ನು ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ತಿಳಿಸಿದೆ. ಅತಿ ಹೆಚ್ಚಿನ ಪ್ರಕರಣಗಳಿರುವುದು ಬಿಜೆಪಿ, ಆ ನಂತರ ಕಾಂಗ್ರೆಸ್ ಪಕ್ಷದವರ ಮೇಲೆ.

ಎರಡು ಇತ್ತೀಚಿನ ಘಟನೆಗಳು: ಸಂಸತ್ತಿನಿಂದ ಉಚ್ಚಾಟನೆಗೆ ಮೊದಲು ಪ್ರತಿಪಕ್ಷದ ಎಂಪಿ ಮಹುವಾ ಮೊಯಿತ್ರಾ ಮೇಲಿನ ವೈಯಕ್ತಿಕ ಟೀಕೆಗಳು, ಅಪಾರ ಪುರುಷ ಗಣ್ಯರು ಹಾಜರಿದ್ದ ಹೊಸ ಸಂಸತ್ ಭವನದ ಉದ್ಘಾಟನೆ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಉದ್ದೇಶಪೂರ್ವಕವಾಗಿ ಹೊರಗೆ ಇಟ್ಟಿದ್ದಂತಹ ಕ್ರಮವು ಆಡಳಿತ ಪಕ್ಷದ ಮೇಲೆ ಹಾಗೂ ಎಲ್ಲರನ್ನೂ ಒಳಗೊಳ್ಳುವ ಸಾರ್ವಜನಿಕ ನೆಲೆಯಾಗಿ ಸಂಸತ್ತನ್ನು ರೂಪಿಸುವ ಅವರ ಉದ್ದೇಶದ ಬಗ್ಗೆಯೂ ಸದಭಿಪ್ರಾಯ ಮೂಡಿಸುವಂತಹದ್ದಲ್ಲ

**17ನೇ ಲೋಕಸಭೆಯಲ್ಲಿರುವ 543** ಎಂಪಿಗಳ ಪೈಕಿ ಕೇವಲ 78 ಮಂದಿ ಮಹಿಳೆಯರು. ಮೊದಲ ಲೋಕಸಭೆಯಲ್ಲಿ **5% ಇದ್ದ ಮಹಿಳಾ ಪ್ರಾತಿನಿಧ್ಯ ಪ್ರಸಕ್ತ ಲೋಕಸಭೆಯಲ್ಲಿ 14.3%ಗೆ ಏರಿಕೆಯಾಗಿದೆ**. ಆದರೆ, ಒಟ್ಟು ಮಹಿಳಾ ಜನಸಂಖ್ಯೆಯನ್ನು ಪ್ರತಿನಿಧಿಸುವುದು ಈಗಲೂ ಮರೀಚಿಕೆ.

TEN YEARS OF NDA • A GUARANTEE CHECK •

# ‘ನಾರಿ ಶಕ್ತಿ’ ವರದಿ

**Email** bahutvakarnataka@gmail.com
**Facebook** Bahutva Karnataka
**Instagram** @bahutvakarnataka
**Twitter** @BahutvaKtka